ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಶನಿವಾರ, ಜುಲೈ 22, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 69 RNI : 27369/75

janathavani@mac.com
www.janathavani.com
08192 254736 91642 99999

## ಹಾಲಿನ ದರ 3 ರೂ. ಹೆಚ್ಚಿಸಲು ನಿರ್ಧಾರ

**ಆಗಸ್ಟ್ 1ರಿಂದ ಬೆಲೆ ಹೆಚ್ಚಳ ಜಾರಿ**

ಬೆಂಗಳೂರು, ಜು. 21 - ನಂದಿನಿ ಹಾಲಿನ ದರ ಲೀಟರ್ ಒಂದಕ್ಕೆ 3 ರೂ. ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ. ಈ ನಿರ್ಣಯ ಆಗಸ್ಟ್ 1ರಿಂದ ಜಾರಿಗೆ ಬರಲಿದೆ.

ರಾಜ್ಯದ ಎಲ್ಲ ಹಾಲು ಒಕ್ಕೂಟಗಳು ಮತ್ತು ಕೆಎಂಎಫ್ ಅಧ್ಯಕ್ಷರ ಸಭೆಯ ಬಳಿಕ ಕೆಎಂಎಫ್ ನಿರ್ದೇಶಕ ಹೆಚ್.ಡಿ.ರೇವಣ್ಣ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ್ದು, ಹಾಲಿನ ದರ ಲೀಟರ್‌ಗೆ 5 ರೂ. ಹೆಚ್ಚಿಸಲು ನಾವು (5ನೇ ಪುಟಕ್ಕೆ)

## ಕೃಷ್ಣ ಜನ್ಮಭೂಮಿ-ಈದ್ಗಾ ವಿವಾದದ ವಿವರ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ, ಜು. 21 - ಶ್ರೀ ಕೃಷ್ಣ ಜನ್ಮಭೂಮಿ ಹಾಗೂ ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಸಲ್ಲಿಸುವಂತೆ ಅಲಹಾಬಾದ್ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿ ಎಸ್.ಕೆ. ಕೌಲ್ ಹಾಗೂ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದೆ. ಮಥುರಾ ನ್ಯಾಯಾಲಯದ ಎದುರು ಬಾಕಿ ಇರುವ ಈ ವಿಷಯವನ್ನು ಹೈಕೋರ್ಟ್ ತನ್ನಲ್ಲಿಗೆ ವರ್ಗಾಯಿಸಿಕೊಂಡಿತ್ತು. ಈ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮನವಿ (5ನೇ ಪುಟಕ್ಕೆ)

## ನೈಸ್ ಯೋಜನೆ ವಶಕ್ಕೆ ಪಡೆಯಲು ಆಗ್ರಹ

ಬೆಂಗಳೂರು, ಜು. 21 - ಅಕ್ರಮಗಳ ಆಗರವಾಗಿರುವ ಹಾಗೂ ರಾಜ್ಯದ ಜನತೆಗೆ ವಂಚನೆ ಎಸಗಿರುವ ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ - ನೈಸ್ ಯೋಜನೆಯನ್ನು ಸಂಪೂರ್ಣವಾಗಿ ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ರಾಜ್ಯ ಸರ್ಕಾರವನ್ನು ಒಟ್ಟಾಗಿ ಒತ್ತಾಯ ಮಾಡಿವೆ.

ವಿಧಾನಸೌಧದಲ್ಲಿರುವ ಜೆಡಿಎಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಜಂಟಿ ಮಾಧ್ಯಮಗೋಷ್ಠಿ ನಡೆಸಿದ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಬಸವರಾಜ್ ಬೊಮ್ಮಾಯಿ ಅವರು, ನೈಸ್ ಯೋಜನೆಯನ್ನು (3ನೇ ಪುಟಕ್ಕೆ)



# ಉಜ್ವಲ ಭವಿಷ್ಯಕ್ಕೆ ಅಧ್ಯಾತ್ಮದ ಅರಿವು ಮುಖ್ಯ

### ನಾಗರಸನಹಳ್ಳಿ ವೀರಭದ್ರೇಶ್ವರ ಸಮುದಾಯ ಭವನ ಉದ್ಘಾಟಿಸಿದ ರಂಭಾಪುರಿ ಶ್ರೀ

ದಾವಣಗೆರೆ, ಜು.21- ಎಲ್ಲಾ ರಂಗಗಳಲ್ಲಿ ಅಭಿವೃದ್ಧಿ ಸಾಧಿಸಬೇಕೆಂಬ ಬಯಕೆ ಮನುಷ್ಯನಿಗಿರುವುದು ಸಹಜ. ಆದರೆ ನಿರಂತರ ಪರಿಶ್ರಮ ಮತ್ತು ಸಾಧನೆಯಿಂದ ಮಾತ್ರ ರಚನಾತ್ಮಕ ಕಾರ್ಯಗಳು ನಡೆಯಲು ಸಾಧ್ಯ. ರಚನಾತ್ಮಕ ಕಾರ್ಯಗಳಿಂದ ಸಮಾಜಕ್ಕೆ ಬಹು ದೊಡ್ಡ ಶಕ್ತಿ ಪ್ರಾಪ್ತವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಡಾ. ವೀರಸೋಮೇಶ್ವರ ಭಗವತ್ಪಾದರು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ತಾಲ್ಲೂಕಿನ ನಾಗರಸನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ವೀರಭದ್ರೇಶ್ವರ ಸಮುದಾಯ ಭವನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಾನವನ ಉಜ್ವಲ ಭವಿಷ್ಯಕ್ಕೆ ಆಹಾರ, ಆರೋಗ್ಯ ಮತ್ತು ಅಧ್ಯಾತ್ಮ ಬಹು ಮುಖ್ಯ. ಮಿತವಾದ ಆಹಾರ ಉತ್ತಮವಾದ ಆರೋಗ್ಯ ಮತ್ತು ಮಾನಸಿಕ ಶಾಂತಿಗೆ ಅಧ್ಯಾತ್ಮದ ಅರಿವು ಇರಬೇಕಾಗುತ್ತದೆ. ಶ್ರಮವಿಲ್ಲದೇ ಸಂಪತ್ತು ಬಯಸುವ ಜನ ಇಂದು ಹೆಚ್ಚಾಗಿದ್ದಾರೆ ಎಂದರು.

ಶ್ರಮದಿಂದ ಗಳಿಸಿದ ಸಂಪತ್ತಿಗೆ ಬಹು ದೊಡ್ಡ ಬೆಲೆಯಿದೆ. ಶ್ರಮವಿಲ್ಲದೇ ಗಳಿಸಿದ ಸಂಪತ್ತು ಶಾಶ್ವತವಾಗಿ ಉಳಿಯದು. ಶ್ರೀ ಜಗದ್ಗುರು ರೇಣುಕಾಚಾರ್ಯರು ಕಾಯಕವೇ ಕಳಾ ಚೈತನ್ಯವೆಂದು ಸಾರಿದ್ದಾರೆ. ಅದನ್ನೇ ಶರಣರು ಕಾಯಕವೇ ಕೈಲಾಸವೆಂದು ಹೇಳಿದ್ದಾರೆ. ದೇಹವನ್ನು ದುಡಿಮೆಗೆ ಮನಸ್ಸನ್ನು ಭಗವಂತನಿಗೆ ಅರ್ಪಿಸಿ ನಡೆದಾಗ ಬದುಕು ಪಾವನಗೊಳ್ಳುತ್ತದೆ ಎಂದು ನುಡಿದರು.

ನಾಗರಸನಹಳ್ಳಿಯಲ್ಲಿ ಶ್ರೀ ರಂಭಾಪುರಿ ಪೀಠದ ಕ್ಷೇತ್ರನಾಥ-ಗೋತ್ರ ಪುರುಷ ಶ್ರೀ ವೀರಭದ್ರೇಶ್ವರ ಸ್ವಾಮಿ ನೆಲೆಗೊಂಡಿರುವುದು ತಮ್ಮೆಲ್ಲರ ಸೌಭಾಗ್ಯ. ಶ್ರೀ ವೀರಭದ್ರೇಶ್ವರ ನಾಮಾಂಕಿತದಲ್ಲಿ ಸಮುದಾಯ ಭವನ ನಿರ್ಮಿಸಿ ಉದ್ಘಾಟಿಸುತ್ತಿರುವುದು ನಮಗೆ ಸಂತೋಷ ತಂದಿದೆ. ಇದಕ್ಕಾಗಿ ಶ್ರಮಿಸಿದ ದೇವಸ್ಥಾನ ಕಮಿಟಿ ಮತ್ತು ಸಹಕರಿಸಿದ ದಾನಿಗಳ ಸೇವೆ ಸಾರ್ಥಕಗೊಂಡಿದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡುತ್ತಾ, ವೀರಶೈವ ಧರ್ಮದಲ್ಲಿ ಕಾಯಕ ಮತ್ತು ದಾಸೋಹಕ್ಕೆ ವಿಶೇಷ ಮಹತ್ವ ಕೊಟ್ಟಿದೆ. ತ್ಯಾಗ ಔದಾರ್ಯಗಳಿಂದ ಮಾತ್ರ ಸಮಾಜದಲ್ಲಿ ಸತ್ಕಾರ್ಯಗಳು ನಡೆಯಲು ಸಾಧ್ಯ ಎಂದು ಹೇಳಿದರು.

ಗ್ರಾಮದ ಜನರ ಪರಿಶ್ರಮದಿಂದ ಕಟ್ಟಿದ ಸಮುದಾಯ ಭವನ ಸಾರ್ವಜನಿಕರ ಬಳಕೆಗೆ ಲೋಕಾರ್ಪಣೆಗೊಳ್ಳುತ್ತಿರುವುದು ಹರುಷ ತಂದಿದೆ ಎಂದರು.

ಧರ್ಮ ಸಮಾರಂಭವನ್ನು ರಾಮಘಟ್ಟ ಪುರವರ್ಗ ಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಉದ್ಘಾಟಿಸಿ, ಭೌತಿಕ ಜಂಜಡದ ಬದುಕಿನಲ್ಲಿ ಸಿಲುಕಿರುವ ಮನುಷ್ಯನಿಗೆ ಇಂಥ ಧರ್ಮ ಸಮಾರಂಭಗಳು ನೆಮ್ಮದಿಯನ್ನು ಉಂಟು ಮಾಡುತ್ತವೆ ಎಂದರು.

ಮುಖ್ಯ ಅತಿಥಿಗಳಾಗಿ ದೇವಸ್ಥಾನ ಕಮಿಟಿ ಅಧ್ಯಕ್ಷ ಡಿ.ಹೆಚ್.ವಿರುಪಾಕ್ಷಪ್ಪ, ಕಾರ್ಯದರ್ಶಿ ಎನ್.ಸಿ. ರುದ್ರಪ್ಪ, ಖಜಾಂಚಿ ಎಂ.ಆರ್.ವೀರಭದ್ರಪ್ಪ, ಕುಕ್ಕುವಾಡ ಗ್ರಾ.ಪಂ. ಅಧ್ಯಕ್ಷೆ ಸೌಭಾಗ್ಯಮ್ಮ ಕೆ.ಎನ್.ಪಾಲಾಕ್ಷಪ್ಪ ಪಾಲ್ಗೊಂಡಿದ್ದರು. ಡಿ.ವಿ.ಪ್ರಕಾಶ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಎಂ.ವಿ.ರುದ್ರೇಶ ಸ್ವಾಗತಿಸಿದರು. ಕೆ.ಎಂ.ಮಂಜುನಾಥ ಮತ್ತು ಎನ್.ಆರ್.ಸತೀಶ್ ನಿರೂಪಿಸಿದರು. ಡಿ.ಆರ್.ಧನಂಜಯ ವಂದಿಸಿದರು. ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು.

# ಪಂಚ ಗ್ಯಾರಂಟಿಗಳು ಚುನಾವಣಾ ಆಮಿಷ

### ಸಿದ್ದರಾಮಯ್ಯ ಅನರ್ಹತೆಗಾಗಿ ಹೈಕೋರ್ಟ್‌ನಲ್ಲಿ ಅರ್ಜಿ
### ಜು. 28 ರಂದು ವಿಚಾರಣೆಗೆ ನ್ಯಾಯಾಲಯದ ನಿರ್ಧಾರ

ಬೆಂಗಳೂರು, ಜು. 21 - ಕಾಂಗ್ರೆಸ್ ಚುನಾವಣಾ ವೇಳೆ ಭರವಸೆ ನೀಡಿದ್ದ ಐದು ಗ್ಯಾರಂಟಿಗಳು ಚುನಾವಣಾ ಆಮಿಷಗಳಾಗಿವೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದ್ದು, ಜುಲೈ 28ರಂದು ಇದರ ವಿಚಾರಣೆ ನಡೆಯಲಿದೆ.

ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿರುವ ಐದು ಗ್ಯಾರಂಟಿಗಳು ಭ್ರಷ್ಟ ಪದ್ಧತಿಯಾಗಿದೆ. ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸುವ ಮೂಲಕ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 123 (2) ಉಲ್ಲಂಘಿಸಲಾಗಿದೆ ಎಂದು ಅರ್ಜಿದಾರರು ದೂರಿದ್ದಾರೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ನೀಡಿರುವ ಗ್ಯಾರಂಟಿಗಳು ಕೊಡುಗೆಯ ರೀತಿಯಲ್ಲಿವೆ. ಕಾಂಗ್ರೆಸ್ ನಾಯಕ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಒಪ್ಪಿಗೆಯ ಮೇರೆಗೆ ಈ ರೀತಿಯ ಗ್ಯಾರಂಟಿಗಳನ್ನು ನೀಡಲಾಗಿದೆ. ಸಿದ್ದರಾಮಯ್ಯ ಅವರು ವರುಣ ಕ್ಷೇತ್ರದಿಂದ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ವರುಣ ಕ್ಷೇತ್ರದಲ್ಲಿ ಕೊಡುಗೆಯ ರೀತಿಯಲ್ಲಿ ಗ್ಯಾರಂಟಿಗಳ ಭರವಸೆ ನೀಡಲಾಗಿದೆ. ಇದು ಕಾಂಗ್ರೆಸ್ ಪರ ಮತ ಚಲಾಯಿಸಲು ನೇರವಾದ ಪ್ರಚೋದನೆಯಾಗಿದೆ ಎಂದು ಕೆ.ಎಂ. ಶಂಕರ್ ಎಂಬುವವರು ಅರ್ಜಿ ದಾಖಲಿಸಿದ್ದಾರೆ.

ನ್ಯಾಯಮೂರ್ತಿ ಎಸ್. ಸುನೀಲ್ ದತ್ತ ಯಾದವ್ ಅವರ ಏಕಸದಸ್ಯ ಪೀಠ ಅರ್ಜಿಯ ವಿಚಾರಣೆ ನಡೆಸಿದೆ.

ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲೆ ಪ್ರಮೀಳ ನೇಸರ್ಗಿ, ಐದು ಗ್ಯಾರಂಟಿಗಳ ಹೆಸರಿನಲ್ಲಿ ಮತ (3ನೇ ಪುಟಕ್ಕೆ)

## ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಪಂಚ ಗ್ಯಾರಂಟಿ: ಸಿಎಂ



ಬೆಂಗಳೂರು, ಜು. 21 - ಬೆಲೆ ಏರಿಕೆಯಿಂದ ತತ್ತರಿಸಿರುವ ಜನರ ಕೈಗೆ ದುಡ್ಡು ನೀಡಲು ನಮ್ಮ ಸರ್ಕಾರ ಪಂಚ ಗ್ಯಾರಂಟಿಗಳನ್ನು ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುತ್ತಾ ಅವರು ಇಂದು ಮಾತನಾಡಿದರು.

ಇವರ ಅನುಕೂಲಕ್ಕಾಗಿ ಅನಿವಾರ್ಯವಾಗಿ 13500 ಕೋಟಿ ರೂ. ಹೆಚ್ಚುವರಿ ತೆರಿಗೆ ಸಂಗ್ರಹ ಮಾಡಲು ನಿರ್ಧರಿಸಿದ್ದೇನೆ. ಈ (5ನೇ ಪುಟಕ್ಕೆ)

# ಜಿಲ್ಲೆಯಲ್ಲಿ 'ಗೃಹಲಕ್ಷ್ಮಿ' ಯೋಜನೆ ನೋಂದಣಿಗೆ ಚಾಲನೆ



ದಾವಣಗೆರೆ, ಜು. 21 - ಗೃಹಲಕ್ಷ್ಮಿ ಯೋಜನೆಯಡಿ ಪಡಿತರ ಕಾರ್ಡ್ ಹೊಂದಿದ ಕುಟುಂಬದ ಯಜಮಾನಿಗೆ ಮಾಸಿಕ 2000/- ರೂಪಾಯಿಗಳನ್ನು ಡಿ.ಬಿ.ಟಿ ಮೂಲಕ ನೇರವಾಗಿ ಅವರ ಬ್ಯಾಂಕ್‌ಖಾತೆಗೆ ಜಮಾ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ರೇಷನ್ ಕಾರ್ಡ್‌ನಲ್ಲಿ ನಮೂದಿಸಿರುವ ಮನೆ ಯಜಮಾನಿಯನ್ನೇ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಎಂದು ಪರಿಗಣಿಸಲಾಗುವುದು. ಈ ಯೋಜನೆಗಾಗಿ ಜಿಲ್ಲೆಯಲ್ಲಿ ಗ್ರಾಮ ಒನ್, ಕರ್ನಾಟಕ ಓನ್ ಹಾಗೂ ಸ್ಥಳೀಯ ನಗರಾಡಳಿತ ಸಂಸ್ಥೆಗಳ ಕಛೇರಿಗಳ ಮೂಲಕ ಪ್ರಾರಂಭಿಸುವ ಕೇಂದ್ರಗಳಲ್ಲಿ ಉಚಿತವಾಗಿ ನೋಂದಣಿ ಮಾಡಿಸಬಹುದು.

ಸ್ಥಳೀಯ ಮಟ್ಟದಲ್ಲಿ ಸರ್ಕಾರದಿಂದ ನೇಮಕವಾಗಿರುವ ಪ್ರಜಾಪ್ರತಿನಿಧಿಗಳು ಮನೆ ಮನೆಗೆ ತೆರಳಿ ಉಚಿತವಾಗಿ ಅರ್ಜಿಗಳ ನೋಂದಣಿಯನ್ನು ಮಾಡಿಸಿಕೊಳ್ಳುತ್ತಾರೆ. ಈ ಕೇಂದ್ರಗಳಲ್ಲದೆ ಬೇರೆ ಇನ್ನಾವುದೇ ಕೇಂದ್ರಗಳಲ್ಲಾಗಲೀ ಅಥವಾ ಮೊಬೈಲ್ ಆಪ್‌ಗಳ ಮುಖಾಂತರವಾಗಲೀ ನೋಂದಣಿ ಕಾರ್ಯ ಮಾಡಲಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ನೋಂದಣಿಗಾಗಿ ಶುಲ್ಕವನ್ನು ಪಾವತಿಸುವಂತಿಲ್ಲ.

ಗೃಹಲಕ್ಷ್ಮಿ ಯೋಜನೆ ಸೌಲಭ್ಯ ಪಡೆಯಲು ರೇಷನ್‌ಕಾರ್ಡ್ ಪ್ರತಿ, ಯಜಮಾನಿ ಮತ್ತು ಆಕೆಯ ಪತಿಯ ಆಧಾರ್ ಕಾರ್ಡ್ ಪ್ರತಿ, ಯಜಮಾನಿಯ ಆಧಾರ ಲಿಂಕ್ ಆಗಿರುವ ಬ್ಯಾಂಕ್‌ಖಾತೆ ಪುಸ್ತಕವನ್ನು (3ನೇ ಪುಟಕ್ಕೆ)

### 'ಗೃಹಲಕ್ಷ್ಮಿ'ಯರೇ ಗಮನಿಸಿ...

**'ಜಿಲ್ಲೆಯಲ್ಲಿ ಗ್ರಾಮ ಒನ್, ಕರ್ನಾಟಕ ಓನ್ ಕೇಂದ್ರಗಳಲ್ಲಿ ಹಾಗೂ ಸ್ಥಳೀಯ ನಗರಾಡಳಿತ ಸಂಸ್ಥೆಗಳ ಕಛೇರಿಗಳಲ್ಲಿ ಉಚಿತವಾಗಿ ನೋಂದಣಿ ಮಾಡಿಸಬಹುದು. ಈ ಕೇಂದ್ರಗಳಲ್ಲದೆ ಬೇರೆ ಇನ್ನಾವುದೇ ಕೇಂದ್ರ ಗಳಲ್ಲಾಗಲೀ ಅಥವಾ ಮೊಬೈಲ್ ಆಪ್‌ಗಳ ಮುಖಾಂತರವಾಗಲೀ ನೋಂದಣಿ ಕಾರ್ಯ ಮಾಡಲಾಗುವುದಿಲ್ಲ. ಅಲ್ಲದೇ ಸರ್ಕಾರದಿಂದ ನೇಮಕವಾಗಿರುವ ಪ್ರತಿನಿಧಿಗಳು ಮನೆ-ಮನೆಗೆ ತೆರಳಿ ಉಚಿತವಾಗಿ ನೋಂದಣಿ ಮಾಡಿಸಿ ಕೊಳ್ಳುತ್ತಾರೆ.'**

## ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟರ ಹಣ ಬಳಕೆ



ಬೆಂಗಳೂರು, ಜು. 21 - ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಜಾರಿಗೆ ಹಣಕಾಸು ಹೊಂದಿಸಲು ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟ ಎಸ್ಸಿಪಿ, ಟಿಎಸ್ಪಿ ಅನುದಾನವನ್ನು ದುರ್ಬಳಕೆ ಮಾಡಿ, ಎಸ್ಸಿ/ಎಸ್ಟಿ ಸಮುದಾಯಕ್ಕೆ ದ್ರೋಹ ಮಾಡಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಬಿಜೆಪಿ ಸದಸ್ಯರನ್ನು ವಿಧಾನಸಭೆ ಕಲಾಪ ದಿಂದ ಹೊರಹಾಕಿರುವುದನ್ನು ಖಂಡಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪಕ್ಷದ ವತಿಯಿಂದ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಸರ್ಕಾರ ಬಂದ ಮೇಲೆ ಕರ್ನಾಟಕದ ಜನರ ಬದುಕು ದುಸ್ತರ ಆಗಿದೆ. ರೈತರು ಎರಡು ಬಾರಿ ಬಿತ್ತನೆ ಮಾಡಿದರೂ ಬೆಳೆ ಬರದೇ ರೈತರು ಸಂಕಷ್ಟಕ್ಕೆ ಸಿಕ್ಕಿದ್ದಾರೆ. ಸರ್ಕಾರ ಅವರ ರಕ್ಷಣೆಗೆ ಬಂದಿಲ್ಲ. 2013 ರಿಂದ 18ರ ವರೆಗೆ ಅತಿ ಹೆಚ್ಚು ರೈತರು ಸುಮಾರು 4000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡ ದಾಖಲೆ ಇದೆ ಎಂದು ಹೇಳಿದರು.

ನಾವು ನಮ್ಮ ಬಜೆಟ್‌ನಲ್ಲಿ ಡಿಗ್ರಿವರೆಗೆ ಉಚಿತ ವಿದ್ಯಾಭ್ಯಾಸ ನಿಡುವುದಾಗಿ ಹೇಳಿದ್ದೆವು. ಶಾಲಾ ಮಕ್ಕಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡುವುದಾಗಿ ಹೇಳಿದ್ದೆವು. ಇವರು ಅದನ್ನು ಕೈ ಬಿಟ್ಟಿದ್ದಾರೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಕೊಲೆ, ಸುಲಿಗೆ ಹೆಚ್ಚಾಗಿದೆ ಎಂದು ಆರೋಪಿಸಿದರು.

ಪೊಲೀಸ್ ಠಾಣೆಯಲ್ಲಿ ಮಾಮೂಲು ಕೇಳುವ ಕೆಲಸ (3ನೇ ಪುಟಕ್ಕೆ)

## ಹೆಚ್ಚಿದ ಮಳೆ: ಭದ್ರಾ ಡ್ಯಾಮ್‌ನಲ್ಲಿ ಏರಿಕೆಯಾಗುತ್ತಿರುವ ಒಳ ಹರಿವು

ಶಿವಮೊಗ್ಗ, ಜು. 21 - ಮಲೆನಾಡಿನಲ್ಲಿ ಮಳೆ ಮುಂದುವರೆದಿದ್ದು, ಭದ್ರಾ ಜಲಾಶಯದ ಒಳಹರಿವೂ ಹೆಚ್ಚಳವಾಗುತ್ತಿದೆ. ಗುರುವಾರ 4227 ಕ್ಯೂಸೆಕ್ಸ್ ಇದ್ದ ಒಳಹರಿವು ಶುಕ್ರವಾರ 7734 ಕ್ಯೂಸೆಕ್ಸ್‌ಗೆ ಏರಿಕೆ ಕಂಡಿದೆ.

ಜಲಾಶಯದ ನೀರಿನ ಮಟ್ಟ 143 ಅಡಿ ಆಗಿದೆ, ಕಳೆದ ವರ್ಷ ಈ ದಿನ ಜಲಾಶಯದಲ್ಲಿ 182 ಅಡಿ ನೀರಿತ್ತು, ತುಂಗಾ ಜಲಾಶಯಕ್ಕೂ 23 ಸಾವಿರ ಕ್ಯೂಸೆಕ್ಸ್ ಒಳಹರಿವು ಇದ್ದು ಒಳ ಬರುವ ಎಲ್ಲಾ ನೀರನ್ನು ತುಂಗಭದ್ರಾ ನದಿಗೆ ಹರಿಸಲಾಗುತ್ತಿದೆ. ತುಂಗಾ ಒಳಹರಿವು ಮಧ್ಯರಾತ್ರಿ ವೇಳೆಗೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

# ಪ್ರಧಾನಿ ಮೋದಿಯಿಂದ 118 ಲಕ್ಷ ಕೋಟಿ ಸಾಲ

**ಮುಖ್ಯಮಂತ್ರಿ ಸಿದ್ದರಾಮಯ್ಯ**


ಬೆಂಗಳೂರು, ಜು. 21 - ಮೋದಿ ಅವರು ಪ್ರಧಾನಿ ಆಗುವ ವರೆಗೂ ದೇಶದ ಸಾಲ 53 ಲಕ್ಷ ಕೋಟಿ ಮಾತ್ರ ಇತ್ತು. ಆದರೆ ಈಗ ದೇಶದ ಸಾಲ 170 ಲಕ್ಷ ಕೋಟಿ ಆಗಿದೆ. ಪ್ರಧಾನಿ ಮೋದಿ ಒಬ್ಬರ ಅವಧಿಯಲ್ಲಿ 118 ಲಕ್ಷ ಕೋಟಿ ಸಾಲ ಆಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇಶದ ಸಾಲದ ಪ್ರಮಾಣವನ್ನು ವಿಧಾನ ಪರಿಷತ್ತಿನಲ್ಲಿಂದು ಹೇಳಿದರು.

ಆಯವ್ಯಯದ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿಯವರು, ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಮೋದಿ ಪ್ರಧಾನಿ ಆಗುವವರೆಗೂ ದೇಶದ ಸಾಲ ಇದ್ದದ್ದು ಕೇವಲ 53 ಲಕ್ಷ ಕೋಟಿ ಸಾಲವನ್ನು 170 ಲಕ್ಷ ಕೋಟಿಗೆ ಏರಿಸಿದ್ದೇ ಮೋದಿಯವರ ಸಾಧನೆ ಎಂದು ಹೇಳಿದರು.

ಶ್ರೀಮಂತ ಕಾರ್ಪೋರೇಟ್‌ಗಳ 12 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ ಮೋದಿ ಅವರು ನಾವು ಐದು ಗ್ಯಾರಂಟಿಗಳನ್ನು ಜಾರಿ ಮಾಡಿದರೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎನ್ನುತ್ತಾರೆ.

ಕಚ್ಚಾ ತೈಲದ ಬೆಲೆ ಕಡಿಮೆ ಇದ್ದಾಗಲೂ ಪೆಟ್ರೋಲ್-ಡೀಸೆಲ್ ಬೆಲೆ ಈ (5ನೇ ಪುಟಕ್ಕೆ)

## ಸಾಮಾಜಿಕ ಸಂಘಟನೆಗಳ ಮುಂಚೂಣಿಯ ಉಜ್ಜನಪ್ಪ ನಿಧನ



ದಾವಣಗೆರೆ,ಜು.21- ಸಾಮಾಜಿಕ ಸೇವಾ ಸಂಘಟನೆಗಳಲ್ಲಿ ಮುಂಚೂಣಿಯಲ್ಲಿದ್ದ ಎ.ಆರ್. ಉಜ್ಜನಪ್ಪ ಅವರು ಇಂದು ಮುಂಜಾನೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು.

ಎಂದಿನಂತೆ ಇಂದು ಮುಂಜಾನೆಯೂ ಸಹ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ವಾಯುವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ ಹೃದಯಾಘಾತಕ್ಕೊಳಗಾದರು. ತತ್‌ಕ್ಷಣವೇ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿಯೇ ಕೊನೆಯುಸಿರೆಳೆದರು.

ಪತ್ನಿ ಶ್ರೀಮತಿ ನಾಗಮ್ಮ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಗರಕ್ಕೆ ಸಮೀಪದ ಬೋರಗೊಂಡನಹಳ್ಳಿಯಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ಇಂದು ಸಂಜೆ ನಡೆಯಿತು.

**ಸಂಕ್ಷಿಪ್ತ ಪರಿಚಯ :** ಮೂಲತಃ ಆನೆಕೊಂಡ ಗ್ರಾಮದ ರೇವಕ್ಕರ ಮನೆತನದವರಾದ ಉಜ್ಜನಪ್ಪ, 7 ಜನ ಸಹೋದರರಲ್ಲಿ ಕೊನೆಯವರಾಗಿದ್ದರು. ಬಿಎಸ್ಸಿ. ಬಿ.ಇಡಿ ಪದವೀಧರರಾಗಿದ್ದ ಅವರು, ಕಂದಾಯ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿ ಗ್ರಾಮ ಲೆಕ್ಕಾಧಿಕಾರಿಯಾಗುವುದರ ಮೂಲಕ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದರು. (2ನೇ ಪುಟಕ್ಕೆ)

## ಆರನೇ ವರ್ಷದ ಪುಣ್ಯಸ್ಮರಣೆ



ಕಕ್ಕರಗೊಳ್ಳದ ಪಟೇಲ್ ವೀರಪ್ಪ ಶಾಲೆ ಹಾಗೂ
ನಗರದ ದವನ್ ಕಾಲೇಜ್‌ನ ಗೌರವಾಧ್ಯಕ್ಷರೂ ಮತ್ತು ಕುಮಾರಪಟ್ಟಣಂ
ಗ್ರಾಸಿಂ ಇಂಡಸ್ಟ್ರೀಸ್‌ನ ನಿವೃತ್ತ ಸಹಾಯಕ ಮಹಾಪ್ರಬಂಧಕರೂ ಆಗಿದ್ದ

**ಲಿಂ॥ ಕಕ್ಕರಗೊಳ್ಳ ಗೌಡ್ರು ಪರಮೇಶ್ವರಪ್ಪ**


ಜನನ : 21-08-1943 ಲಿಂಗೈಕ್ಯ : 22-07-2017

ಇವರು ಶಿವೈಕ್ಯರಾಗಿ ಇಂದಿಗೆ ಆರು ವರ್ಷಗಳಾದವು.
ಸದಾ ನಿಮ್ಮ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಗಿರಿಜಮ್ಮ ಪರಮೇಶ್ವರಪ್ಪ, ದಾವಣಗೆರೆ.
ಪುತ್ರಿ : ಡಾ. ಪ್ರಭಾ, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು
ಚಿ॥ಸಮರ್ಥ, ಕು॥ಶ್ರೇಷ್ಠ, ಮಾ॥ಶಿವ
ಪುತ್ರ : ಶ್ರೀ ಜಿ.ಪಿ. ಪ್ರಕಾಶ್, ಮ್ಯಾನೇಜರ್, ಗ್ರಾಸಿಂ ಇಂಡಸ್ಟ್ರೀಸ್, ಕುಮಾರಪಟ್ಟಣಂ. ✦ ಶ್ರೀಮತಿ ಸುಮ ಹಾಗೂ ಚಿ॥ ವಿರಾಜಿತ್
ಸಹೋದರರಾದ : ✦ ಶ್ರೀ ಕೆ. ಜಿ. ಬಸವನಗೌಡ್ರು, ಶ್ರೀಮತಿ ದ್ರಾಕ್ಷಾಯಣಮ್ಮ, ಕಕ್ಕರಗೊಳ್ಳ.
✦ ಶ್ರೀಮತಿ ಕುಸುಮ, ದಿ॥ಕೆ.ಜಿ. ಲೋಕೇಶ್ವರಪ್ಪ, ದಾವಣಗೆರೆ. ✦ ಶ್ರೀ ಕೆ. ಜಿ. ವೀರಬಸಪ್ಪ, ಶ್ರೀಮತಿ ಮಹಾಲಕ್ಷ್ಮಿ ದಾವಣಗೆರೆ.
ಮತ್ತು ಸಹೋದರಿಯರು ಹಾಗೂ ಮಕ್ಕಳು, ಗೌಡ್ರು ಮನೆತನದವರು ಹಾಗೂ ಬಂಧು-ಮಿತ್ರರು, ಕಕ್ಕರಗೊಳ್ಳ.

ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು
ಪಟೇಲ್ ವೀರಪ್ಪ ಟ್ರಸ್ಟ್ (ರಿ.)
ಪಟೇಲ್ ವೀರಪ್ಪ ಸ್ಕೂಲ್, ಕಕ್ಕರಗೊಳ್ಳ
Spurthi Educational Trust (R) DAVAN
ಸ್ಫೂರ್ತಿ ಎಜುಕೇಷನ್ ಟ್ರಸ್ಟ್ (ರಿ.)
ದವನ್ ಕಾಲೇಜ್, ದಾವಣಗೆರೆ
Spurthi

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರೂ
ಲಯನ್ಸ್ ಜಿಲ್ಲಾ ಮಾಜಿ ರಾಜ್ಯಪಾಲರೂ,
ನಮ್ಮ ಬಂಧುಗಳೂ ಆದ ನಿವೃತ್ತ ಉಪ ತಹಶೀಲ್ದಾರ್

**ಲ. ಎ.ಆರ್. ಉಜ್ಜನಪ್ಪ**

ಅವರು ದಿನಾಂಕ 21.07.2023ರ ಶುಕ್ರವಾರ ಬೆಳಿಗ್ಗೆ 7.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.7.2023ರ ಸಂಜೆ 6 ಗಂಟೆಗೆ ಬೋರಗೊಂಡನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ದುಃಖತಪ್ತರು :
ರೇವಕ್ಕಳರ ವಂಶಸ್ಥರು, ಆನೆಕೊಂಡ
ಗಿರಿಯವ್ವಳರ ವಂಶಸ್ಥರು, ಶಾಮನೂರು.

# ದೇಶ ರಕ್ಷಿಸಿದೆ, ಪತ್ನಿ ರಕ್ಷಿಸಲಾಗಲಿಲ್ಲ

**ಮಣಿಪುರದ ಬೆತ್ತಲೆ ಘಟನೆಯ ಬಗ್ಗೆ ಮಾಜಿ ಯೋಧನ ವ್ಯಥೆ**

ಇಂಫಾಲ್, ಜು. 21 - ನಾನು ದೇಶವನ್ನು ರಕ್ಷಿಸಿದೆ, ಆದರೆ ಪತ್ನಿಯನ್ನು ಅವಮಾನದಿಂದ ರಕ್ಷಿಸಿಕೊಳ್ಳಲು ಆಗಲಿಲ್ಲ ಎಂದು ಮಣಿಪುರದ ಮಾಜಿ ಯೋಧ ಮನದಾಳದ ನೋವು ಹೇಳಿಕೊಂಡಿದ್ದಾರೆ. ಕಾರ್ಗಿಲ್ ಯೋಧನ ಪತ್ನಿ ಸೇರಿದಂತೆ ಇಬ್ಬರು ಮಹಿಳೆಯರನ್ನು ಮಣಿಪುರದಲ್ಲಿ ಬೆತ್ತಲೆ ಮೆರವಣಿಗೆ ಮಾಡಿದ ಘಟನೆ ನಡೆದಿತ್ತು.

ಮೇ 4ರಂದು ನಡೆದ ಘಟನೆಯ ವಿಡಿಯೋ ಇತ್ತೀಚೆಗೆ ಬೆಳಕಿಗೆ ಬಂದು ದೇಶಾದ್ಯಂತ ಆಘಾತಕ್ಕೆ ಕಾರಣವಾಗಿತ್ತು. ಈ ಇಬ್ಬರು ಮಹಿಳೆಯರ ಪೈಕಿ ಒಬ್ಬರ ಪತಿ ಅಸ್ಸಾಂ ರೆಜಿಮೆಂಟ್‌ನಲ್ಲಿ ಸುಬೇದಾರ್ ಆಗಿ ಕಾರ್ಯ ನಿರ್ವಹಿಸಿದ್ದರು.

ನಾನು ಕಾರ್ಗಿಲ್ ಸಮರದಲ್ಲಿ ಹೋರಾಟ ಮಾಡಿದ್ದೆ ಹಾಗೂ ಶ್ರೀಲಂಕಾದಲ್ಲಿ ಭಾರತೀಯ ಶಾಂತಿ ಪಾಲನಾ ಪಡೆಯ ಭಾಗವಾಗಿದ್ದೆ. ನಾನು ದೇಶವನ್ನು ರಕ್ಷಿಸಿದ್ದೆ, ಆದರೆ, ನಿವೃತ್ತಿಯ ನಂತರ ನನ್ನ ಮನೆ, ಪತ್ನಿ ಹಾಗೂ ಗ್ರಾಮಸ್ಥರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ ಎಂದು ಹತಾಶೆಯಾಗಿದೆ. ನನಗೆ ನೋವಾಗಿದೆ, ಖಿನ್ನನಾಗಿದ್ದೇನೆ ಎಂದವರು ಹೇಳಿದ್ದಾರೆ.

ಮೇ 4ರಂದು ಗುಂಪೊಂದು ತಮ್ಮ ಪ್ರದೇಶದ ಹಲವಾರು ಮನೆಗಳನ್ನು ಸುಟ್ಟಿತು. ಇಬ್ಬರು ಮಹಿಳೆಯರನ್ನು ವಿವಸ್ತ್ರಗೊಳಿಸಿ ಜನರ ಎದುರು ಗ್ರಾಮದಲ್ಲಿ ನಡೆಯುವಂತೆ ಮಾಡಿತು. ಪೊಲೀಸರು ಅಲ್ಲಿದ್ದರೂ ಕ್ರಮ ತೆಗೆದುಕೊಳ್ಳಲಿಲ್ಲ. ಮನೆಗಳನ್ನು ಸುಟ್ಟುವರು ಹಾಗೂ ಮಹಿಳೆಯರನ್ನು ಅವಮಾನಿಸಿದವರಿಗೆ ತಕ್ಕ ದಂಡ ವಿಧಿಸಬೇಕು ಎಂದವರು ಒತ್ತಾಯಿಸಿದ್ದಾರೆ.

ಮಣಿಪುರದಲ್ಲಿ ಇದುವರೆಗೆ ನಡೆದ ಹಿಂಸಾಚಾರಗಳಲ್ಲಿ 160 ಜನ ಸಾವನ್ನಪ್ಪಿದ್ದಾರೆ. ಮೀಟಿ ಸಮುದಾಯಕ್ಕೆ ಎಸ್.ಟಿ. ಸ್ಥಾನ ಕೊಡುವುದಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಹಿಂಸಾತ್ಮಕ ಹೋರಾಟಗಳು ನಡೆಯುತ್ತಿವೆ.

# ನಾನು ದುಡಿದು, ನಾವು ಉಣ್ಣುವುದೇ ಕಾಯಕ, ದಾಸೋಹ

**ಬಸವಣ್ಣನವರ ಕಾಯಕ ದಾಸೋಹ ವಿಷಯ ಕುರಿತ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಶಿವನಕೆರೆ ಬಸವಲಿಂಗಪ್ಪ**

ದಾವಣಗೆರೆ, ಜು. 21- 12ನೇ ಶತಮಾನದ ಬಸವಾದಿ ಶರಣರು ಸಮ ಸಮಾಜ ನಿರ್ಮಾಣಕ್ಕೆ, ಸರ್ವೋದಯಕ್ಕೆ, ಅಸ್ಪೃಶ್ಯತಾ ನಿವಾರಣೆಗೆ, ಲಿಂಗ, ವರ್ಗ ಅಸಮಾನತೆಗಳ ವಿರುದ್ಧ ಅರಿವು ಮೂಡಿಸಿದರು. ಇಂದಿನ ಮಾನವ ಹಕ್ಕುಗಳು, ಪ್ರಜಾಪ್ರಭುತ್ವದ ತತ್ವಗಳ ತಳಹದಿ ಇತ್ಯಾದಿಗಳಿಗೆ ಕಾರಣಕರ್ತರಾದರು. ಇದಕ್ಕೆ ಮೂಲಭೂತ ಕಾರಣ, ಜನರಲ್ಲಿ ನೈತಿಕತೆಯನ್ನು ಬಡಿದೆಬ್ಬಿಸಿ, ಕಾಯಕ ದಾಸೋಹಗಳಲ್ಲಿ ನಿರತರಾಗುವಂತೆ ಮಾಡಿದ್ದರು ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಶಿವನಕೆರೆ ಬಸವಲಿಂಗಪ್ಪ ತಿಳಿಸಿದರು.

ನಗರದ ಕರುಣಾ ಟ್ರಸ್ಟ್‌ನಲ್ಲಿ ಬಸವಣ್ಣನವರ ಕಾಯಕ ದಾಸೋಹ ವಿಷಯ ಕುರಿತು ಮೊನ್ನೆ ನಡೆದ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಾಯಕ ಎಂದರೆ ಕಾಯದ ಕಷ್ಟದಿಂದ ಸರ್ವರಿಗೂ ಉತ್ಪಾದಿಸುವ ಆಹಾರ, ಆಶ್ರಯ, ಅರಿವು, ಅರಿವೆ, ಔಷಧಗಳು ಇತ್ಯಾದಿ. ಇಂದು ಕಾಯದ ಶ್ರಮ ಬಿಟ್ಟ ನಾವು ಏನೆಲ್ಲಾ ಕಾಯಿಲೆ, ಕಸಾಲೆಗಳು, ಪರಿಸರ ಮಾಲಿನ್ಯ ಜಗಳಗಳನ್ನು ಮೈಮೇಲೆ ಎಳೆದು ಕೊಂಡಿರುವುದು ನಮಗೆಲ್ಲಾ



ಸರ್ವವೇದ್ಯ. ಬಸವಣ್ಣನವರು ಮೂಲಭೂತವಾಗಿ ಸೋಮಾರಿಯಾದ ಮನುಷ್ಯನಿಗೆ ದುಡಿಯಲು ಹಚ್ಚಿದರು. ಕೆರೆ, ಕುಂಟೆ ನಿರ್ಮಿಸಿ ನೀರಾವರಿ ತಂದರು. ಹಾಗಾಗಿ ಕಲ್ಯಾಣದಲ್ಲಿ ಆರ್ಥಿಕಾಭಿವೃದ್ಧಿಯಾಗಿ ನೀಡುವವರಿದ್ದರೇ ಹೊರತು, ಬೇಡುವವರಿಲ್ಲದಂತಹ ಸುಸ್ಥಿತಿ ಬಂತು. ಓದಲಾಗದ ಲಿಪಿ ಓದಿ ಕೊಪ್ಪರಿಗೆ ಭಂಡಾರ ಭೂಮಿಯಿಂದ ಬಸವಣ್ಣ ತಂದರು ಎನ್ನುವುದೆಲ್ಲಾ ಸೃಷ್ಟಿಸಿದ ಕಟ್ಟುಕತೆಗಳು. ಹಾಗೆಯೇ ಕಲ್ಯಾಣದ ಜನರು ಸೃಷ್ಟಿಸಿದ ಸಂಪತ್ತನ್ನು ಮೂಲಭೂತ ಅವಶ್ಯಕತೆಗಳ ನಂತರ ಮಿಕ್ಕೆಲ್ಲಾ ಸಂಪನ್ಮೂಲವನ್ನು ಸರ್ವೋದಯಕ್ಕಾಗಿ ದಾಸೋಹದ ಮೂಲಕ ಬಳಸಲಾಯಿತು. ಈ ಘನ ಕಾರ್ಯದಲ್ಲಿ 770 ಅಮರಗಣಂಗಳು, 1,96,000 ಶರಣರು ಸಕ್ರಿಯವಾಗಿ ತೊಡಗಿಕೊಂಡರು. ಹಾಗಾಗಿ ಕಲ್ಯಾಣ ಜನಪರ, ಜೀವಪರ, ಜಗದ ಯುಗದ ಹಿಂದೆಂದೂ ಕಂಡಿರದ ಮಾದರಿ ಕಲ್ಯಾಣವಾಯಿತು ಎಂದರು.

ಅಂದು ಶರಣರ ಸಮಾಜದಲ್ಲಿ 'ನಾನು ದುಡಿಯಬೇಕು, ನಾವು ಉಣ್ಣಬೇಕು' ಎನ್ನುವ ತತ್ವ ಆಚರಿಸಿ, ಮಿಗುತುಳಿತಾವಾದುದ್ದನ್ನು ದಾಸೋಹ ಮಾಡಿದರು. ಯಾರೋ ದುಡಿದದ್ದನ್ನು, ಮೋಸದಿಂದ ಬಂದದ್ದನ್ನು ಉಣಬಾರದು ಎಂಬ ತತ್ವವಿತ್ತು. ಹಾಗಾಗಿಯೇ ವೈದಿಕ ಧರ್ಮದ ಷೋಡಷ ದಾನ (16 ನಮೂನೆ ದಾನ, ಕನ್ಯಾದಾನ, ವಸ್ತ್ರದಾನ, ಗೋ ದಾನ, ಗೃಹದಾನ.... ಇತ್ಯಾದಿ) ಇದು ವೈದಿಕರಿಗೆ ಬೇಕಾದ ಸಕಲ ಸೌಲಭ್ಯ ಒದಗಿಸುವ ದಾನ ಸಂಪ್ರದಾಯವಾಗಿತ್ತು. ಅದನ್ನು ವಿರೋಧಿಸಿದ ಬಸವಣ್ಣ ಸತ್ಯ ಶುದ್ಧ ಕಾಯಕದಿಂದ ಬಂದದ್ದನ್ನು ಸರ್ವರ ಹಿತಕ್ಕಾಗಿ ದಾಸೋಹ ಮಾಡುವ ಪದ್ಧತಿ ಜಾರಿಗೆ ತಂದರು. ಭೂಮಿ ಒಂದು ಅಕ್ಷಯ ಪಾತ್ರೆ ನಿಜ. ಆದರೆ, ಭೂಮಿಯಲ್ಲಿ ಶ್ರಮಿಕರುಶ್ರಮವಹಿಸಿದುಡಿಯದಿದ್ದರೆ,ಯಾವುದೇ ಫಲವನ್ನು ಪಡೆಯಲು ಸಾಧ್ಯವಿಲ್ಲ ಎಂಬುದು ಬಸವಣ್ಣನ ತತ್ವವಾಗಿತ್ತು ಎಂದು ಬಸವಲಿಂಗಪ್ಪ ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ರಾಘವನ್, ಪ್ರೊ. ಎಂ. ಬಸವರಾಜ್, ಆವರಗೆರೆ ರುದ್ರಮುನಿ, ನಲ್ಕುಂದ ಹಾಲೇಶಪ್ಪ, ಗುರುಮೂರ್ತಿ, ಹೆಚ್.ವಿ. ಪ್ರಸಾದ್, ರಾಮನಗೌಡ ಕುಸಗೂರು, ಲಾಯರ್ ಸಿದ್ದಯ್ಯ, ಮಲ್ಲಬಾದಿ ಬಸವರಾಜ್ ಮುಂತಾದವರು ಮಾತನಾಡಿದರು.

# ಬಿತ್ತನೆ ಮಾಡಿದ ಮೆಕ್ಕೆಜೋಳ ಬೀಜಗಳನ್ನು ಹೆಕ್ಕಿ ತಿಂದ ಕಾಡು ಹಂದಿ

ಹರಪನಹಳ್ಳಿ, ಜು. 21 - ಸಾಲ ಮಾಡಿ ಅಡಕೆ ಹೊಲದಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿದ್ದ ರೈತನೊಬ್ಬನ ಹೊಲಕ್ಕೆ ರಾತ್ರಿ ವೇಳೆ ಕಾಡು ಹಂದಿಗಳು ನುಗ್ಗಿ ಮೊಳಕೆ ಒಡೆದಿದ್ದ ಮೆಕ್ಕೆಜೋಳ ಬೀಜಗಳನ್ನು ಹೆಕ್ಕಿ ತಿಂದು ಹೋಗಿರುವ ಘಟನೆ ತಾಲ್ಲೂಕಿನ ವ್ಯಾಸನತಾಂಡಾ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.



ಗ್ರಾಮದ ಯಮುನಾನಾಯ್ಕ್ ಎಂಬುವವರಿಗೆ ಸೇರಿದ ಎರಡು ಎಕರೆ ಜಮೀನಿನಲ್ಲಿ ಕಳೆದ 9 ದಿನಗಳ ಹಿಂದೆ ಮೆಕ್ಕೆಜೋಳ ಬಿತ್ತನೆ ಮಾಡಿದ್ದರು, ವಾರದಿಂದ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಬೀಜ ಮೊಳಕೆ ಒಡೆದು ಮೇಲೆದ್ದಿತ್ತು, ಮಳೆಗಾಲವಾದ್ದರಿಂದ ರೈತ ರಾತ್ರಿ ಸಮಯದಲ್ಲಿ ಇಲ್ಲದಿರುವುದರಿಂದ ರಾತ್ರೋರಾತ್ರಿ ಕಾಡು ಹಂದಿಗಳು ಹೊಲಕ್ಕೆ ನುಗ್ಗಿ ಸಾಲು ಹಿಡಿದು ಮೊಳಕೆ ಹೊಡೆದಿದ್ದ ಮೆಕ್ಕೆಜೋಳ ಬೀಜಗಳನ್ನು ಸಂಪೂರ್ಣ ಹೆಕ್ಕಿ ತಿಂದು ಹೋಗಿವೆ.

**ಹರಪನಹಳ್ಳಿ**

ಸಾಲ ಮಾಡಿ ಗೊಬ್ಬರ, ಬೀಜ ಖರೀದಿಸಿ ಎರಡು ಎಕರೆ ಜಮೀನಿನಲ್ಲಿ ಮೆಕ್ಕೆಜೋಳವನ್ನು ಬಿತ್ತನೆ ಮಾಡಿದ್ದೇ ಆದರೆ ಹಂದಿಗಳು ರಾತ್ರಿ ಸಮಯದಲ್ಲಿ ಹೊಲಕ್ಕೆ ನುಗ್ಗಿ ಮೊಳಕೆ ಒಡೆದಿದ್ದ ಬೀಜಗಳನ್ನು ಸಂಪೂರ್ಣ ತಿಂದು ನಾಶ ಮಾಡಿವೆ, ಈ ಬಗ್ಗೆ ತಾಲ್ಲೂಕು ಆಡಳಿತ ಕ್ರಮ ವಹಿಸಿ ಸೂಕ್ತ ಪರಿಹಾರ ನೀಡಬೇಕೆಂದು ರೈತ ಯಮುನಾನಾಯ್ಕ್ ಪತ್ರಿಕೆಯೊಂದಿಗೆ ಅಳಲು ತೋಡಿಕೊಂಡಿದ್ದಾರೆ.

ತಾಲ್ಲೂಕು ಅರಣ್ಯ ವಲಯಾಧಿಕಾರಿ ಮಲ್ಲಪ್ಪ ಮಾತನಾಡಿ ಹಂದಿಗಳ ತಡೆಗಾಗಿ ರೈತರು ತಮ್ಮ ಜಮೀನುಗಳಲ್ಲಿ ಮುಳ್ಳುತಂತಿ ಬೇಲಿಯನ್ನು ನಿರ್ಮಾಣ ಮಾಡಿಕೊಳ್ಳಬೇಕು, ತಂತಿಬೇಲಿ ನಿರ್ಮಾಣ ಮಾಡಿಕೊಳ್ಳಲು ರೈತರಿಗೆ ಸರ್ಕಾರದಿಂದ 50%ರಷ್ಟು ಸಬ್ಸಿಡಿ ಇದೆ, ವ್ಯಾಸನತಾಂಡದ ರೈತನಿಗೆ ಇಲಾಖೆಯಿಂದ ಪರಿಹಾರ ಒದಗಿಸಲು ಪ್ರಯತ್ನ ಮಾಡಲಾಗುವುದು ಎಂದರು

# ಅನುಮತಿ ಇಲ್ಲದೇ ಸುಪ್ರೀಂ ಎದುರು ಉಗ್ರನ ಹಾಜರಿ : ಗಂಭೀರ ಲೋಪದ ಬಗ್ಗೆ ತನಿಖೆಗೆ ಆದೇಶ

ನವದೆಹಲಿ, ಜು. 21 - ಜೀವಾವಧಿ ಶಿಕ್ಷೆ ಎದುರಿಸುತ್ತಿರುವ ಜೆಕೆಎಲ್‌ಎಫ್ ಉಗ್ರವಾದಿ ಸಂಘಟನೆಯ ಮುಖ್ಯಸ್ಥ ಯಾಸಿನ್ ಮಲಿಕ್‌ನನ್ನು ಅನುಮತಿ ಇಲ್ಲದೇ ಸುಪ್ರೀಂ ಕೋರ್ಟ್ ಎದುರು ಹಾಜರು ಪಡಿಸಿರುವ ಘಟನೆ ನಡೆದಿದೆ. ಗಂಭೀರವಾದ ಈ ಲೋಪದ ಬಗ್ಗೆ ತನಿಖೆ ನಡೆಸಲು ಆದೇಶಿಸಲಾಗಿದೆ.

ಉಗ್ರವಾದಿ ಹಣಕ್ಕೆ ಸಂಬಂಧಿಸಿದಂತೆ ಜೈಲು ಶಿಕ್ಷೆಗೆ ಗುರಿಯಾಗಿರುವ ಮಲಿಕ್‌ನನ್ನು ಬಿಗಿ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಕರೆ ತರಲಾಗಿತ್ತು. ಇದು ಅಲ್ಲಿದ್ದವರಿಗೆ ಅಚ್ಚರಿ ತಂದಿತು. ಅತಿ ಹೆಚ್ಚಿನ ಅಪಾಯವಿರುವ ದೋಷಿಗಳನ್ನು ನ್ಯಾಯಾಲಯಕ್ಕೆ ತರುವ ಬಗ್ಗೆ ನಿಯಮಗಳಿವೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ ಹೇಳಿದರು. ಮಲಿಕ್ ಹಾಜರಿಗೆ ಆದೇಶ ಹೊರಡಿಸಿರಲಿಲ್ಲ ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ದೀಪಂಕರ್ ದತ್ತ ಅವರು ಹೇಳಿದರು. ಈ ಬಗ್ಗೆ ಮೆಹ್ತ ಅವರು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಗೆ ಪತ್ರ ಬರೆದಿದ್ದಾರೆ. ನಂತರ ಘಟನೆಯ ತನಿಖೆಗೆ ಆದೇಶಿಸಲಾಗಿದೆ.

# ಹರಿಹರ : ಏಕರೂಪ ನಾಗರಿಕ ಸಂಹಿತೆ ಕೈ ಬಿಡುವಂತೆ ಆಗ್ರಹಿಸಿ ಹರಿಹರದಲ್ಲಿ ಪ್ರತಿಭಟನೆ



ಹರಿಹರ, ಜು,21- ಏಕರೂಪ ನಾಗರಿಕ ಸಂಹಿತೆ ಕೈ ಬಿಡುವಂತೆ ಆಗ್ರಹಿಸಿ ನಗರದ ಜಾಮಿಯಾ ಮಸೀದಿ ಸಂಘಟನೆ ಹಾಗೂ ಅನ್ಸರ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಶಶಿಧರಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಮುಸ್ಲಿಂ ಸಮುದಾಯದ ಮುಖಂಡರು ಏಕರೂಪ ನಾಗರಿಕ ಸಂಹಿತೆ ಭಾರತದ ನಾಗರಿಕರಿಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುತ್ತದೆ. ಸಂವಿಧಾನದ ಆರ್ಟಿಕಲ್ 26 ಭಾರತದ ಪ್ರತಿಯೊಬ್ಬ ನಾಗರಿಕನಿಗೆ ತನ್ನ ಇಚ್ಛೆ ಅನುಸಾರ ತಾನು ತನಗೆ ಇಷ್ಟವಾದ ಧರ್ಮದ ಪ್ರಕಾರ ಜೀವನವನ್ನು ನಡೆಸಲು ಧಾರ್ಮಿಕ ಸ್ವಾತಂತ್ರ್ಯವನ್ನು ಸಂವಿಧಾನ ನೀಡಿದೆ. ಆದ್ದರಿಂದ ಏಕರೂಪ ನಾಗರಿಕ ಸಂಹಿತೆ ಸಂವಿಧಾನಕ್ಕೆ ವಿರುದ್ಧವಾಗಿದೆ. ಭಾರತದಲ್ಲಿ ಬುಡಕಟ್ಟು ಜನಾಂಗದವರು, ಮುಸಲ್ಮಾನರು, ಕ್ರಿಶ್ಚಿಯನ್, ಬೌದ್ಧರು, ಜೈನರು, ಸಿಖ್ಖರು ಸೇರಿದಂತೆ ವಿವಿಧ ಜನಾಂಗದವರು ಇದ್ದು, ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮಗಳ ಆಚರಣೆಗಳನ್ನು ಪಾಲಿಸುತ್ತಾ ಬಂದಿರುತ್ತಾರೆ ಎಂದರು.

ಈ ಸಂದರ್ಭದಲ್ಲಿ ಜಾಮಿಯಾ ಮಸೀದಿ ಅಧ್ಯಕ್ಷ ಅಶ್ಫಾಕ್ ಅಹ್ಮದ್, ಸಮಾಜ ಸೇವಕ ಸನಾವುಲ್ಲಾ, ಹೆಚ್. ರೋಷನ್ ಖಾನ್, ಸೈಯದ್ ವಾಲಿಸಾಬ್, ಸೈಯದ್ ಮೈನುದ್ದೀನ್ ಮುಲ್ಲಾ, ಇಮ್ತಿಯಾಜ್, ಸೈಯದ್ ಮುಜಾಹಿದ್, ಅನ್ವರ್ ಅಸೋಸಿಯೇಷನ್ ಅಧ್ಯಕ್ಷ ಆಸೀಫ್ ಅತ್ತಾರ್, ಟಿ. ಅಲಿಕಪ್ಪರ್, ಮಹಮ್ಮದ್ ಅಲಿ, ಸಿಕಂದರ್ ಫಯಾಜ್ ಇತರರು ಹಾಜರಿದ್ದರು.

# ನಗರದಲ್ಲಿ ಇಂದು ಟಿ. ಗಿರಿಜಾ ಸಂಸ್ಮರಣೆ



ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ, ವನಿತಾ ಸಮಾಜ ಹಾಗೂ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಹಿಳಾ ಸಮಾಜ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಹಿರಿಯ ಸಾಹಿತಿ ಟಿ. ಗಿರಿಜಾ ಸಂಸ್ಮರಣೆ, ದತ್ತಿ ಉಪನ್ಯಾಸ ಹಾಗೂ ಪುಸ್ತಕ ಲೋಕಾರ್ಪಣೆ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಹಿಳಾ ಸೇವಾ ಸಮಾಜದಲ್ಲಿ ನಡೆಯಲಿದೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ಗೌರವ ಉಪಸ್ಥಿತರಿರುವರು. ಶ್ರೀಮತಿ ಮಲ್ಲಮ್ಮ ನಾಗರಾಜ್ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮವನ್ನು ಬಿ. ವಾಮದೇವಪ್ಪ ಉದ್ಘಾಟಿಸುವರು.

ಶ್ರೀಮತಿ ಅರುಂಧತಿ ರಮೇಶ್ ಅವರ 'ಭವದ ಬೆಳಕು' ಕೃತಿ ಲೋಕಾರ್ಪಣೆ ನಡೆಯುವುದು. ಉಪನ್ಯಾಸದಲ್ಲಿ ಡಾ. ಎಸ್.ಎಂ. ಗೌರಮ್ಮ ಅವರ ದತ್ತಿಯನ್ನು 'ಹಿರಿಯ ಸಾಹಿತಿ ಟಿ. ಗಿರಿಜರವರ ಸಾಧನೆ' ಕುರಿತು ಮತ್ತು ಡಾ. ಪಿ.ಎಂ. ಅನುರಾಧ ಅವರ ದತ್ತಿ ಉಪನ್ಯಾಸ 'ಮಹಿಳಾ ಸಾಹಿತ್ಯಕ್ಕಿರುವ ಸವಾಲುಗಳು' ಕುರಿತು ನಡೆಯುವುದು.

ಮುಖ್ಯ ಅತಿಥಿಗಳಾಗಿ ಪ್ರಸನ್ನ ರೆಡ್ಡಿ ಆಗಮಿಸುವರು. ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

**ದತ್ತಿಗಳು, ದತ್ತಿ ದಾನಿಗಳು :** ಬೂದುಗುಂಪಿನ ಮಠದ ರಮೇಶ್ ದತ್ತಿಯನ್ನು ದಾನಿಗಳಾದ ಶ್ರೀಮತಿ ಅರುಂಧತಿ ರಮೇಶ್, ಶ್ರೀ ನೀಲಗುಂದ ಸಿದ್ದರಾಮಣ್ಣ ದತ್ತಿಯನ್ನು ದಾನಿಗಳಾದ ಶ್ರೀಮತಿ ಜಯಮ್ಮ ನೀಲಗುಂದ ಡಾ. ವಿಜಯಲಕ್ಷ್ಮಿ ಸುರೇಂದ್ರ ಹಾಗೂ ಶ್ರೀಮತಿ ಗಂಗಮ್ಮ ಶ್ರೀ ಎಸ್.ಬಿ. ಮಹದೇವಪ್ಪ ಸಿರಿಗೆರೆ ದತ್ತಿಯನ್ನು ದಾನಿಗಳಾದ ಶ್ರೀಮತಿ ಎಸ್.ಎಂ. ಮಲ್ಲಮ್ಮ ಹೆಚ್.ಬಿ. ನಾಗರಾಜಪ್ಪ ಮತ್ತು ಮಕ್ಕಳು ನಡೆಸಿಕೊಡುವರು.

# ರಾಜಸ್ಥಾನ : ಮಹಿಳಾ ದೌರ್ಜನ್ಯದ ಬಗ್ಗೆ ಆತ್ಮಾವಲೋಕನವಾಗಲಿ ಎಂದ ಸಚಿವರ ವಜಾ

ನವದೆಹಲಿ, ಜು. 21 - ರಾಜಸ್ಥಾನದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಆತ್ಮಾವಲೋಕನವಾಗಲಿ ಎಂದು ಹೇಳಿದ ಸಚಿವನನ್ನು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸಂಪುಟದಿಂದ ವಜಾಗೊಳಿಸಿದ್ದಾರೆ.

ರಾಜಸ್ಥಾನದ ವಿಧಾನಸಭೆಯಲ್ಲಿ ಕನಿಷ್ಠ ಆದಾಯ ಗ್ಯಾರಂಟಿ ಮಸೂದೆಯ ಕುರಿತು ಚರ್ಚೆ ನಡೆಯುತ್ತಿತ್ತು. ಆಗ ಕಾಂಗ್ರೆಸ್ ಶಾಸಕರೊಬ್ಬರು ಮಣಿಪುರ ಹಿಂಸಾಚಾರದ ಬಗ್ಗೆ ಭಿತ್ತಿಪತ್ರ ಪ್ರದರ್ಶಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ರಾಜೇಂದ್ರ ಸಿಂಗ್ ಗುಢ, ನಾವು ರಾಜಸ್ಥಾನದಲ್ಲಿ ಮಹಿಳೆಯರನ್ನು ರಕ್ಷಿಸಲು ವಿಫಲವಾಗಿದ್ದೇವೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿವೆ. ಮಣಿಪುರದ ವಿಷಯ ಪ್ರಸ್ತಾಪಿಸುವ ಬದಲು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಸಚಿವರ ಹೇಳಿಕೆಯಿಂದ ಅಸಮಾಧಾನಗೊಂಡ ಮುಖ್ಯಮಂತ್ರಿ ಗೆಹ್ಲೋಟ್, ಸಚಿವರನ್ನು ಸಂಪುಟದಿಂದ ವಜಾಗೊಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ಸತ್ಯ ಹೇಳಿದ್ದಕ್ಕಾಗಿ ಗುಢಾರನ್ನು ಸಂಪುಟದಿಂದ ವಜಾಗೊಳಿಸಲಾಗಿದೆ. ಇದು ಮಹಿಳಾ ಪೀಡನೆಯ ಬಗ್ಗೆ ಕಾಂಗ್ರೆಸ್ ಎಷ್ಟು ಗಂಭೀರವಾಗಿದೆ ಎಂಬುದನ್ನು ತೋರಿಸುತ್ತದೆ ಎಂದಿದ್ದಾರೆ.


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 21.07.2023ರ ಶುಕ್ರವಾರ ನಿಧನರಾದ

**ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರೂ, ಲಯನ್ಸ್ ಕ್ಲಬ್ ಮಾಜಿ ಗವರ್ನರ್ ಆದ**

**ಎ.ಆರ್. ಉಜ್ಜಿನಪ್ಪ**

**ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.**
**ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ,**
**ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.**

**ನಯನ ಏಜೆನ್ಸೀಸ್ ಗ್ರೂಪ್,** ದಾವಣಗೆರೆ
**ನಯನ ಫ್ಯಾಮಿಲಿ**
**ವರ್ಮ ಗ್ರೂಪ್ಸ್,** ದಾವಣಗೆರೆ
**ಪ್ರವೀಣ್ ಚಂದ್ (ಶಾ ಕೇಶವ್ ಜೀ ಮುಲ್‌ಜಿ)**


# ಸಾಮಾಜಿಕ ಸಂಘಟನೆಗಳ ಮುಂಚೂಣಿಯ ಎ.ಆರ್. ಉಜ್ಜನಪ್ಪ ನಿಧನ

**(1ನೇ ಪುಟದಿಂದ)** ಶಾಮನೂರು, ಮಾಯ ಕೊಂಡ, ಮಲೇಬೆನ್ನೂರು ಸೇರಿದಂತೆ, ವಿವಿಧ ಭಾಗಗಳಲ್ಲಿ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ, ದಾವಣಗೆರೆ ಉಪ ವಿಭಾಗಾಧಿಕಾರಿ ಗಳ ಕಚೇರಿ ವ್ಯವಸ್ಥಾಪಕ ಒಳಗೊಂಡಂತೆ ಹಂತ-ಹಂತವಾಗಿ ಮುಂಬಡ್ತಿಗಳನ್ನು ಪಡೆದು ಉಪ ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸಿ, ಸರ್ಕಾರಿ ಸೇವೆಯಿಂದ ನಿವೃತ್ತಿ ಪಡೆದಿದ್ದರು.

ವಿದ್ಯಾರ್ಥಿ ದಿಸೆಯಿಂದಲೂ ಸಂಘಟನೆ ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಉಜ್ಜ ನಪ್ಪ, ಸರ್ಕಾರಿ ನೌಕರಿಯ ಜೊತೆ - ಜೊತೆಗೆ ಸಾಮಾಜಿಕ ಸೇವೆ ಮೂಲಕ ಹತ್ತಾರು ಸಾಮಾಜಿಕ ಸಂಘಟನೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿದ್ದರು. ತಮ್ಮ ವೃತ್ತಿಗೆ ಸಂಬಂಧಿಸಿದ ಸರ್ಕಾರಿ ನೌಕರರ ಸಂಘಟನೆಯಲ್ಲಿದ್ದ ಅವರು, ಅದರ ತಾಲ್ಲೂಕು ಅಧ್ಯಕ್ಷರಾಗಿ, ಜಿಲ್ಲಾ ಅಧ್ಯಕ್ಷರಾಗಿದ್ದರು. ತಮ್ಮ ಅಧ್ಯಕ್ಷ ಅವಧಿಯಲ್ಲಿ ಸರ್ಕಾರಿ ನೌಕರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಗರದಲ್ಲಿ ಸುಸಜ್ಜಿತವಾದ ಸರ್ಕಾರಿ ನೌಕರರ ಭವನವನ್ನು ನಿರ್ಮಿಸುವಲ್ಲಿ ಶ್ರಮಿಸಿದ್ದರು.

ಸರ್ಕಾರಿ ನೌಕರಿಯಲ್ಲಿದ್ದಾಗಲೇ ಸರ್ಕಾರಿ ನೌಕರರ ಸಂಘದ ಜೊತೆಗೆ, ಕನ್ನಡ ಸಾಹಿತ್ಯ ಪರಿಷತ್, ಲಯನ್ಸ್ ಸಂಸ್ಥೆಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದರೂ, ಸರ್ಕಾರಿ ನೌಕರರ ಸಂಘಟನೆಗೆ ಒತ್ತು ನೀಡಿದ್ದರು. ಸರ್ಕಾರಿ ಸೇವೆಯಿಂದ ನಿವೃತ್ತಿಯಾದ ನಂತರ ಸಾಮಾಜಿಕ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದರು.

ಲಯನ್ಸ್ ಕ್ಲಬ್ ದಾವಣಗೆರೆ ವಿದ್ಯಾನಗರ ಶಾಖೆಯ ಸ್ಥಾಪಕರಲ್ಲೊಬ್ಬರಾಗಿದ್ದ ಉಜ್ಜನಪ್ಪ ಅವರು ಅಧ್ಯಕ್ಷರಾಗಿ, ವಲಯಾಧ್ಯಕ್ಷರಾಗಿ, ಪ್ರಾಂತೀಯ ಅಧ್ಯಕ್ಷರಾಗಿ, ಜಿಲ್ಲಾ ಚೇರ್ಮನ್ ಆಗಿದ್ದರಲ್ಲದೇ, ಲಯನ್ಸ್ ಸಂಸ್ಥೆಯ ಉನ್ನತ ಸ್ಥಾನ ಜಿಲ್ಲಾ ಲಯನ್ಸ್ 317ಸಿ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು.

ಏತನ್ಮಧ್ಯೆ, ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪದಾಧಿಕಾರಿಯಾಗಿದ್ದ ಉಜ್ಜನಪ್ಪ, ದಾವಣಗೆರೆ ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ತಮ್ಮ ಅವಧಿಯಲ್ಲಿ ಕುವೆಂಪು ಕನ್ನಡ ಭವನದ ಕಾಮಗಾರಿಯನ್ನು ಪರಿಪೂರ್ಣವಾಗಿಸಿದ್ದರು.

ಪ್ರಸ್ತುತ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾಗಿದ್ದರು. ಹೀಗೆ ಹಲವಾರು ಸಂಘಟನೆಗಳಲ್ಲಿ ಸಕ್ರಿಯವಾಗುವುದರೊಂದಿಗೆ ಕೊನೆವರೆಗೂ ಕ್ರಿಯಾಶೀಲ ವ್ಯಕ್ತಿತ್ವ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

**ಕಸಾಪ ಶ್ರದ್ಧಾಂಜಲಿ :** ಎ.ಆರ್. ಉಜ್ಜನಪ್ಪ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಮೃತರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆಗೆ ಕೊಂಡೊಯ್ಯುವ ಮಾರ್ಗ ಮಧ್ಯೆ ಕುವೆಂಪು ಕನ್ನಡ ಭವನದ ಆವರಣಕ್ಕೆ ತರಲಾಗಿತ್ತು. ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ಪಾರ್ಥಿವ ಶರೀರಕ್ಕೆ ಕನ್ನಡದ ಶಾಲನ್ನು ಹೊದಿಸುವುದರ ಮೂಲಕ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಕಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಸೇರಿದಂತೆ, ಅನೇಕರು ಉಪಸ್ಥಿತರಿದ್ದು, ಪಾರ್ಥಿವ ಶರೀರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ಹಿರಿಯ ಸಾಹಿತಿಗಳಾದ ಡಾ. ಎಂ.ಜಿ. ಈಶ್ವರಪ್ಪ, ಪ್ರೊ. ಎಸ್.ಬಿ. ರಂಗನಾಥ್, ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರುಗಳಾದ ಡಾ. ಬಿ.ಎಸ್. ನಾಗಪ್ರಕಾಶ್, ಹೆಚ್.ಎನ್. ಶಿವಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ನೀಲಿ ಉಮೇಶ್ ಮತ್ತಿತರರು ಮೃತರ ನಿವಾಸಕ್ಕೆ ಭೇಟಿ ನೀಡಿ ಅಂತಿಮ ದರ್ಶನ ಪಡೆದರು.

## ಕಸಾಪದಲ್ಲಿ ಇಂದು ಶ್ರದ್ಧಾಂಜಲಿ ಸಭೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಎ.ಆರ್. ಉಜ್ಜನಪ್ಪ ಗೌರವಾರ್ಥ ಇಂದು ಸಂಜೆ 5 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಲಿದೆ.


# ಸವಿನೆನಪು



**ಕೆ.ಎಂ ಹನುಮಂತರಾಜ್** ಇವರ ಧರ್ಮಪತ್ನಿ

**ಶ್ರೀಮತಿ ಕೆ.ಹೆಚ್ ಗೀತಾ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸವಿನೆನಪಿನಲ್ಲಿರುವ...

**ಸಹೋದರ : ಬಿ. ಶಿವಕುಮಾರ್, ಶ್ರೀಮತಿ ಮಮತ ಹಾಗೂ ಬಿಂದಪ್ಪ ವಂಶಸ್ಥರು, ಶಾಮನೂರು.**
**ಮತ್ತು ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.**



# ಜ್ಞಾನವಾಪಿ ಮಸೀದಿ ಸಮೀಕ್ಷೆಗೆ ಕೋರ್ಟ್ ಆದೇಶ

ವಾರಣಾಸಿ, ಜು. 21 - ಕಾಶಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿಯನ್ನು ದೇವಾಲಯದ ಮೇಲೆ ಕಟ್ಟಲಾಗಿದೆಯೇ ಎಂಬ ಬಗ್ಗೆ ವಿವರವಾದ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು. ಅಗತ್ಯ ಇರುವ ಕಡೆ ಉತ್ಖನನ ನಡೆಸಬೇಕು ಎಂದು ಸ್ಥಳೀಯ ನ್ಯಾಯಾಲಯವು ಪುರಾತತ್ವ ಇಲಾಖೆಗೆ ಆದೇಶಿಸಿದೆ.

ಶಿವಲಿಂಗ ಎಂದು ಹೇಳಲಾದ ಆಕೃತಿ ಪತ್ತೆಯಾದ ವಜುಖಾನಾದಲ್ಲಿ ಸಮೀಕ್ಷೆ ನಡೆಸಬೇಕಿಲ್ಲ ಎಂದು ನ್ಯಾಯಾಲಯ ಹೇಳಿದೆ. ಈ ಜಾಗವನ್ನು ರಕ್ಷಿಸಲು ಸುಪ್ರೀಂ ಕೋರ್ಟ್ ಈ ಹಿಂದೆ ಆದೇಶ ಹೊರಡಿಸಿತ್ತು.

ಆಗಸ್ಟ್ 4ರಂದು ವಿಡಿಯೋ ಹಾಗೂ ಚಿತ್ರಗಳನ್ನು ಒಳಗೊಂಡ ಸಮೀಕ್ಷಾ ವರದಿ ಸಲ್ಲಿಸುವಂತೆ ಜಿಲ್ಲಾ ನ್ಯಾಯಮೂರ್ತಿ ಎ.ಕೆ. ವಿಶೇಷ್ ಅವರು ಪುರಾತತ್ವ ಇಲಾಖೆಗೆ ತಿಳಿಸಿದ್ದಾರೆ. ಈ ಹಿಂದೆ ಇದ್ದ ದೇವಾಲಯದ ಮೇಲೆ ಮಸೀದಿಯನ್ನು ಕಟ್ಟಲಾಗಿದೆಯೇ ಎಂಬ ಬಗ್ಗೆ ವೈಜ್ಞಾನಿಕ ತನಿಖೆ ನಡೆಸಬೇಕು. ಜಿ.ಪಿ.ಆರ್. ತಂತ್ರಜ್ಞಾನ ಬಳಸಬೇಕು ಎಂದೂ ನ್ಯಾಯಾಲಯ ತಿಳಿಸಿದೆ.

# ಹರಪನಹಳ್ಳಿ: ವಿದ್ಯುತ್ ಅವಘಡ-ಎಮ್ಮೆ, ಹಸು ಸಾವು



ಹರಪನಹಳ್ಳಿ, ಜು.21- ವಿದ್ಯುತ್ ಅವಘಡದಿಂದ ಎಮ್ಮೆ ಹಾಗೂ ಹಸುಗಳು ಸಾವನ್ನಪ್ಪಿರುವ ಘಟನೆ ಪಟ್ಟಣದ ಅಯ್ಯನಕೇರಿ ಬಳಿ ಜರುಗಿದೆ.

ಪಟ್ಟಣದ ಗೌಳಿ ನಾಗಪ್ಪನವರಿಗೆ ಸೇರಿದ ಗೋಡಾಮಿನಲ್ಲಿ ಶುಕ್ರವಾರ ತಡ ರಾತ್ರಿ ವಿದ್ಯುತ್ ಅವಘಡದಿಂದ 6 ಎಮ್ಮೆ ಹಾಗೂ 2 ಹಸುಗಳು ಸಾವನ್ನಪ್ಪಿ, ಉಳಿದಂತೆ ಹತ್ತಾರು ಎಮ್ಮೆಗಳಿಗೆ ಗಾಯಗಳಿಗಿವೆ. ಈ ಕುರಿತು ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನಾ ಸ್ಥಳಕ್ಕೆ ತಹಶೀಲ್ದಾರ್ ಶಿವಕುಮಾರ್ ಬಿರಾದಾರ್, ಮುಖಂಡರಾದ ಶಶಿದರ ಪೂಜಾರ್, ಆಲದಹಳ್ಳಿ ಷಣ್ಮುಖಪ್ಪ ಭೇಟಿ ನೀಡಿ, ಗೌಳಿ ನಾಗಪ್ಪನವರ ಕುಟುಂಬದವರಿಗೆ ಸ್ವಾಂತನ ಹೇಳಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas



**ಮನೆ ಸೇರುವ ಧಾವಂತ .. !**

ಹರಿಹರದಲ್ಲಿ ಬೆಳಗ್ಗೆ ಯಿಂದ ಸಂಜೆಯವರೆಗೆ ಮಳೆ ಸುರಿಯಿತು. ಗಾಂಧಿ ವೃತ್ತದಲ್ಲಿ ಮಹಿಳೆ ತಲೆಯ ಮೇಲೆ ಕುರ್ಚಿಯನ್ನು ಹೊತ್ತುಕೊಂಡು, ತನ್ನ ಎರಡು ಮಕ್ಕಳನ್ನು ಕರೆದುಕೊಂಡು ಹೋಗುತ್ತಿರುವ ದೃಶ್ಯ.

ಚಿತ್ರ: ಎಂ. ಚಿದಾನಂದ ಕಂಚಿಕೇರಿ, ಹರಿಹರ

# ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ್ಯ ಮುಖ್ಯ: ಡಾ.ನಾಗೇಶ್

ದಾವಣಗೆರೆ, ಜು. 21- ಅನ್ನದಾನಕ್ಕಿಂತ ವಿದ್ಯಾದಾನ ಮುಖ್ಯ. ವಿದ್ಯೆ ಕದಿಯಲಾರದ ಸಂಪತ್ತು. ವಿದ್ಯೆಗೆ ಪ್ರಾಮುಖ್ಯತೆ ಹೆಚ್ಚು. ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ತಾವೇ ಪ್ರದರ್ಶಿಸಬೇಕು. ಇದಕ್ಕೆ ಎಲ್ಲರ ಪ್ರೋತ್ಸಾಹ ಅತ್ಯಗತ್ಯ ಎಂದು ಯುಬಿಡಿಟಿ ಕಾಲೇಜಿನ ಪ್ರಾಧ್ಯಾಪಕ ಡಾ. ಎನ್. ನಾಗೇಶ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಡಿಆರ್ ಆರ್ ಪಾಲಿಟೆಕ್ನಿಕ್ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ಇಂಡಕ್ಷನ್ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಪ್ರಯತ್ನ ಪಡದೇ ಯಾವ ಕೆಲಸಗಳು ಆಗಲು ಸಾಧ್ಯವಿಲ್ಲ. ಜೀವನದಲ್ಲಿ ಗುರಿ ಮುಖ್ಯ. ವ್ಯಕ್ತಿತ್ವ ವಿಕಸನವನ್ನು ಮಾಡಿಕೊಳ್ಳುವ ಮೂಲಕ ಸರ್ವಾಂಗೀಣ ಪ್ರಗತಿಯತ್ತ ಚಿತ್ತ ಹರಿಸಬೇಕೆಂದು ಹಿತ ನುಡಿದರು.

ದೇವರು ಕೊಟ್ಟ ದೇಹವನ್ನು ವಿಕಾರ ಮಾಡಿಕೊಳ್ಳಬಾರದು. ದೇಹವನ್ನು ಸುಂದರವಾಗಿಟ್ಟುಕೊಳ್ಳಬೇಕು. ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ವಿದ್ಯಾರ್ಥಿಗಳ ನಡವಳಿಕೆ ಮೇಲೆ ವ್ಯಕ್ತಿತ್ವ ನಿರ್ಧಾರವಾಗುತ್ತದೆ.



ಜೀವನದಲ್ಲಿ ಗುರಿ, ಛಲ ಮುಖ್ಯ ಎಂದರು.

ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಕೇವಲ ಅಂಕ ಗಳಿಕೆ ವಿದ್ಯೆಗಿಂತ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಅಗತ್ಯವಿದೆ ಎಂದು ಹೇಳಿದರು. ವಿದ್ಯಾರ್ಥಿಗಳು ಕೇವಲ ಪದವೀಧರರಾದರೆ ಸಾಲದು. ಜೀವನ ಕೌಶಲ್ಯ ಮುಖ್ಯವಾಗಿದ್ದು, ಓದು, ಬರಹ ತುಂಬಾ ಮುಖ್ಯ. ಪರೀಕ್ಷಾ ವಿಧಾನ ಹಾಗೂ ಶಿಕ್ಷಣ ವ್ಯವಸ್ಥೆಗೆ ಅನುಗುಣವಾಗಿ ವಿದ್ಯಾರ್ಥಿಗಳು ಬದಲಾಗಿದ್ದಾರೆ ಎಂದರು.

ದೊಡ್ಡದಾದ ಗುರಿ, ಶಿಸ್ತು, ಛಲ, ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿದೆ. ಕನ್ನಡಿಗ ಎನ್ನುವ ಅಭಿಮಾನವಿರಬೇಕು. ಆದರೆ ದುರಭಿಮಾನವಿರಬಾರದು. ಯಾವ ಭಾಷೆಯನ್ನೂ ವಿರೋಧಿಸಬಾರದು. ವ್ಯಕ್ತಿತ್ವ ಬೆಳವಣಿಗೆಗೆ ಎಲ್ಲಾ ಭಾಷೆಗಳನ್ನು ಕಲಿಯುವ ಅವಶ್ಯವಿದೆ. ನಮ್ಮ ಮಾತೃಭಾಷೆಯನ್ನು ಪ್ರೀತಿಸಬೇಕೆಂದರು.

ಆಯಾ ಕಾಲೇಜುಗಳ ಧ್ಯೇಯ ವಾಕ್ಯಗಳು ವಿದ್ಯಾರ್ಥಿಗಳ ಗುರಿಯನ್ನು ನಿರ್ಧಿರಿಸುತ್ತವೆ. ಮಾನವೀಯತೆ ರೂಢಿಸಿಕೊಳ್ಳಿ, ಉತ್ತಮ ಸಾಧನೆ ಮಾಡಿ, ಪೋಷಕರಿಗೂ, ಶಿಕ್ಷಕರಿಗೂ ಕೀರ್ತಿ ತರುವಂತಾಗಬೇಕೆಂದು ಹಿತ ನುಡಿದರು.

ಅಧ್ಯಕ್ಷತೆ ವಹಿಸಿದ್ದ ಡಿ.ಆರ್.ಆರ್. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಡಾ. ಎ.ಎಂ. ರವಿ ಮಾತನಾಡಿ, ವಿದ್ಯಾರ್ಥಿಗಳಿಗೆ ಇಂಡಕ್ಷನ್ ಪ್ರೋಗ್ರಾಮ್ ಕತ್ತಲೆಯಿಂದ ಬೆಳಕಿನ ಕಡೆಗೆ ತರುವಂತಹ ಪ್ರಯತ್ನವಾಗಿದೆ ಎಂದರು.

ಕಾಲೇಜಿನಲ್ಲಿ ಎಲ್ಲರ ಸಹಕಾರ ವಿದ್ಯಾರ್ಥಿಗಳಿಗೆ ಯಾವತ್ತೂ ಇರುತ್ತದೆ. ಕಲಿಕಾಸಕ್ತಿಯೊಂದಿಗೆ ಉತ್ತಮ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಮೂಲಕ ವಿದ್ಯಾರ್ಥಿ ಜೀವನದಲ್ಲಿ ಪ್ರಗತಿ ಹೊಂದುವಂತೆ ಶುಭ ಹಾರೈಸಿದರು.

ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಕುಲಸಚಿವ ಹೆಚ್.ಜಗದೀಶ, ಸಿ.ಸಿ. ಟೆಕ್ ಮ್ಯಾನೇಜರ್ ಎಡ್ವರ್ಡ್ ಸ್ಟ್ಯಾನ್ಲಿ ಮತ್ತಿತರರು ಉಪಸ್ಥಿತರಿದ್ದರು.

ಉಪನ್ಯಾಸಕರಾದ ಸಿ.ಎನ್. ವಿಕಾಸ್, ಸಿ. ತಿಪ್ಪೇಸ್ವಾಮಿ ಅತಿಥಿಗಳ ಪರಿಚಯ ಮಾಡಿದರು. ಸಿ.ಎಸ್. ಆಶಾ ನಿರೂಪಿಸಿದರು. ಹಿರಿಯ ಶ್ರೇಣಿ ಉಪನ್ಯಾಸಕಿ ಡಾ. ವಿ.ಎಂ. ಸುನಂದ ಸ್ವಾಗತಿಸಿದರು. ಉಪನ್ಯಾಸಕಿ ಸ್ವಪ್ನ ವಂದಿಸಿದರು.

# ಯೋಜನೆಗಳಿಗೆ ಪರಿಶಿಷ್ಟರ ಹಣ ಬಳಕೆ

**(1ನೇ ಪುಟದಿಂದ)** ಶುರುವಾಗಿದೆ. ವಿದ್ಯಾರ್ಥಿಗಳು, ರೈತರು, ಸರ್ಕಾರಿ ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ದುಡಿಯುವ ಸಾಮಾನ್ಯ ಜನರ ಬದುಕು ಅಸ್ಥಿರಗೊಳಿಸಿದ್ದಾರೆ. ಇವರು ಮಂಡಿಸಿರುವುದು ಜನ ವಿರೋಧಿ ಬಜೆಟ್. ಇವರು ಗ್ಯಾರಂಟಿಗಳಿಗೆ ಹಣ ಹೊಂದಿಸಲು ಪರದಾಡುತ್ತಿದ್ದಾರೆ. ಇವರ ಅವಧಿಯಲ್ಲಿ ಅತಿ ಹೆಚ್ಚು ಸಾಲ ಮಾಡಿದ್ದಾರೆ. ನಿಜಲಿಂಗಪ್ಪರಿಂದ ಹಿಡಿದು ಜಗದೀಶ್ ಶೆಟ್ಟರ್‌ವರೆಗೆ ಒಂದು ಲಕ್ಷ ಕೋಟಿ ಸಾಲವಾಗಿತ್ತು. ಸಿದ್ದರಾಮಯ್ಯ ಅವರ ಅವಧಿಯಲ್ಲಿ ಒಂದು ಲಕ್ಷ ಮೂವತ್ತು ಸಾವಿರ ಕೋಟಿ ಸಾಲ ಮಾಡಿದ್ದಾರೆ ಎಂದು ಟೀಕಿಸಿದರು.

ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಗೃಹ ಲಕ್ಷ್ಮಿ ಯೋಜನೆಗೆ 6 ಸಾವಿರ ಕೋಟಿ ರೂ. ಎಸ್‌ಸಿಪಿ, ಟಿಎಸ್‌ಪಿ ಹಣ ಬಳಕೆ ಮಾಡಿಕೊಂಡಿದ್ದಾರೆ. ಗ್ಯಾರಂಟಿಗಳಿಗೆ 13000 ಕೋಟಿ ರೂ. ವರ್ಗಾವಣೆ ಮಾಡಿದ್ದಾರೆ. ಕಾಂಗ್ರೆಸ್‌ನಲ್ಲಿರುವ ದಲಿತ ಶಾಸಕರು ಹಾಗೂ ಸಚಿವರು ಏನು ಮಾಡುತ್ತಿದ್ದೀರಿ. ಅದನ್ನು ಕೇಳಲು ಧೈರ್ಯ ಇಲ್ಲವೇ? ಎಂದು ಪ್ರಶ್ನಿಸಿದರು.


ಅಂಬೇಡ್ಕರ್ ಅವರ ಹೆಸರಿನಲ್ಲಿ ನಾವು 100 ಹಾಸ್ಟೆಲ್ ನಿರ್ಮಾಣ ಮಾಡಲು ಘೋಷಣೆ ಮಾಡಿದ್ದೆವು, ಹಿಂದುಳಿದ ವರ್ಗದ ಹಾಸ್ಟೆಲ್ ನಿರ್ಮಾಣ ಮಾಡಲು ಘೋಷಣೆ ಮಾಡಿದ್ದೆವು. ಅವುಗಳನ್ನು ನಿಮ್ಮ ಬಜೆಟ್ ನಲ್ಲಿ ಘೋಷಣೆ ಮಾಡಲಿಲ್ಲ. ನೀವು ದಲಿತರ ವಿರೋಧಿಗಳು ಎಂದು ಆರೋಪಿಸಿದರು.

ಭ್ರಷ್ಟಾಚಾರದಲ್ಲಿ ಸಿದ್ದರಾಮಯ್ಯ ಸರ್ಕಾರ ನಂಬರ್ ಒನ್ ಅಂತ ವರದಿ ಬಂದಿದೆ. ಗುಮಾಸ್ತನಿಂದ ಹಿಡಿದು ಸೆಕ್ರೆಟರಿವರೆಗೂ ವರ್ಗಾವಣೆಗೆ ರೇಟ್ ಫಿಕ್ಸ್ ಮಾಡಿದ್ದೀರಿ. ಮಾಲಿನ್ಯ ನಿಯಂತ್ರಣ ಮಂಡಳಿಗೆ ಐಎಫ್‌ಎಸ್ ಅಧಿಕಾರಿ ನೇಮಕ ಮಾಡಬೇಕು. ಅದರ ಬದಲು ಸಂಬಂಧಿಕ ಅಂತ ಗುತ್ತಿಗೆ ನೌಕರರನ್ನು ಸೆಕ್ರೆಟರಿಯಾಗಿ ನೇಮಕ ಮಾಡಿದ್ದಾರೆ ಎಂದೂ ಟೀಕಿಸಿದರು.

ಅಧಿಕಾರಕ್ಕೆ ಬಂದು ಎರಡೇ ತಿಂಗಳಲ್ಲಿ ಸಿದ್ದರಾಮಯ್ಯ ಸರ್ಕಾರ ಜನಪ್ರಿಯತೆ ಕಳೆದುಕೊಂಡಿದೆ. ಐದು ಜನ ಟೆರರಿಸ್ಟ್ ಗಳು ಸಿಕ್ಕಿದ್ದಾರೆ. ಅವರನ್ನು ಟೆರರಿಸ್ಟ್ ಎನ್ನಲು ಆಗುವುದಿಲ್ಲ ಎಂದು ಗೃಹ ಸಚಿವರು ಹೇಳಿದ್ದಾರೆ. ಸಾಮಾನ್ಯ ಅಪರಾಧ ಮಾಡುವವರು ಹ್ಯಾಂಡ್ ಗ್ರ್ಯಾನೈಡ್ ಇಟ್ಟುಕೊಳ್ಳುತ್ತಾರಾ ? ಇದೆಲ್ಲದಕ್ಕೂ ರಾಜ್ಯದ ಜನತೆ ಲೋಕಸಭಾ ಚುನಾವಣೆಯಲ್ಲಿ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

# ಕೇಂದ್ರದ ಬರ ಮಾನದಂಡ ಬದಲಿಸಲು ಪತ್ರ : ಸಚಿವ ಕೃಷ್ಣ ಭೈರೇಗೌಡ

ಬೆಂಗಳೂರು, ಜು. 21 - ಬರ ಪೀಡಿತ ಪ್ರದೇಶ ಘೋಷಣೆ ಕುರಿತ ಮಾನದಂಡಗಳು ವಾಸ್ತವ ಆಧರಿಸಿ ಬದಲಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.



ರಾಜ್ಯದಲ್ಲಿ ಮಳೆ ಕೊರತೆ ಕುರಿತು ವಿಧಾನಸಭೆಯಲ್ಲಿ ನಡೆದ ಅಲ್ಪಾವಧಿ ಚರ್ಚೆಯ ವೇಳೆ ಮಾತನಾಡಿದ ಸಚಿವರು, ಪ್ರಸ್ತುತ ಕೇಂದ್ರದ ಬರ ಕೈಪಿಡಿ ಪ್ರಕಾರ ರಾಜ್ಯ ಸರ್ಕಾರಕ್ಕೆ ಸಾಕಷ್ಟು ಪರಿಹಾರ ನೀಡಲು ಸಾಧ್ಯವಾಗುತ್ತಿಲ್ಲ ಮತ್ತು ಅದರ ಪ್ರಕಾರ ಪರಿಹಾರ ನೀಡಿದರೆ ಜನರಿಂದ ಆಕ್ರೋಶ ಎದುರಿಸಬೇಕಾಗುತ್ತದೆ ಎಂದರು.

ಬರ ಘೋಷಣೆ ಮಾಡಲು ಕೇಂದ್ರ ಸರ್ಕಾರ ಬರ ಕೈಪಿಡಿ ಹೊಂದಿದ್ದು, ಈ ಕೈಪಿಡಿಯನ್ನು 2016ರಲ್ಲೇ ಬಿಡುಗಡೆ ಮಾಡಲಾಗಿತ್ತು. ಅದನ್ನು 2020ರಲ್ಲಿ ಪರಿಷ್ಕರಣೆ ಮಾಡಿ ಪ್ರಕಟಿಸಿತ್ತು. ಇದರ ಪ್ರಕಾರ ವಾಡಿಕೆಗಿಂತ ಶೇ. 60 ರಷ್ಟು ಮಳೆ ಕೊರತೆಯಾಗಿರಬೇಕು ಮತ್ತು ಕನಿಷ್ಠ ಮೂರು ವಾರಗಳ ಕಾಲ ಮಳೆಯಾಗದಿದ್ದರೆ ಎಂಬ ಷರತ್ತುಗಳನ್ನು ವಿಧಿಸಲಾಗಿದೆ ಎಂದು ಸಚಿವರು ಹೇಳಿದರು.

ಕೇಂದ್ರದ ಮಾನದಂಡಗಳ ಪ್ರಕಾರ, ರಾಜ್ಯದಲ್ಲಿ ಮಧ್ಯಮ ಬರಗಾಲವಿದ್ದರೆ ಪರಿಹಾರ ನೀಡಬೇಕು ಮತ್ತು ಜೂನ್-ಜುಲೈನಲ್ಲಿ ಮಳೆಯಾಗುವವರೆಗೆ ಬರ ಘೋಷಣೆ ಮಾಡಲು ಸಾಧ್ಯವಿಲ್ಲ. ಆಗಸ್ಟ್ ಮೊದಲ ವಾರದಲ್ಲೂ ಬರಗಾಲ ಘೋಷಣೆಗೆ ಅವಕಾಶ ಇಲ್ಲ. ಆದರೆ ಪರಿಸ್ಥಿತಿ ತೀವ್ರ ವಿಕೋಪಕ್ಕೆ ತಿರುಗಿದರೆ ಮಾತ್ರ ಅಕ್ಟೋಬರ್‌ನಲ್ಲಿ ಬರಗಾಲ ಪರಿಸ್ಥಿತಿ ಘೋಷಣೆ ಮಾಡಬಹುದು ಎಂದು ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ ಎಂದರು.

ಮಾನದಂಡಗಳು ವಾಸ್ತವಗಳಿಂದ ದೂರವಿರುವುದರಿಂದ ಅದನ್ನು ಬದಲಾಯಿಸುವಂತೆ ಕೇಂದ್ರಕ್ಕೆ ಪತ್ರ ಬರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ. ಒಂದೆರಡು ದಿನಗಳಲ್ಲಿ ವಿವರವಾದ ಪತ್ರ ಕಳುಹಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಗಿಂತ ಶೇ.56 ರಷ್ಟು ಮಳೆ ಕೊರತೆಯಾಗಿದೆ. ಜುಲೈ ತಿಂಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದ್ದು, ಮಳೆಯ ಕೊರತೆ ಇದೀಗ ಶೇ. 29ಕ್ಕೆ ಇಳಿದಿದೆ. ಹೀಗಾಗಿ ಕುಡಿಯುವ ನೀರಿನ ಪೂರೈಕೆಗೆ ಯಾವುದೇ ಸಮಸ್ಯೆ ಇಲ್ಲ ಎಂದು ಮಾಹಿತಿ ನೀಡಿದ್ದಾರೆ.

ಹವಾಮಾನ ಇಲಾಖೆಯ ಪ್ರಕಾರ, ರಾಜ್ಯದ ಬಹುತೇಕ ಭಾಗಗಳಲ್ಲಿ ಆಗಸ್ಟ್ 3 ರವರೆಗೆ ಮುಂಗಾರು ಮಳೆ ಸಕ್ರಿಯವಾಗಿರುತ್ತದೆ. ಈ ಬಾರಿ ಎಲ್‌ನಿನೋ ಪರಿಣಾಮದ ಹೊರತಾಗಿಯೂ, ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಮುನ್ಸೂಚನೆ ಇದೆ ಎಂದು ಅವರು ಹೇಳಿದರು.

# 9 ವರ್ಷ ಮೊದಲೇ ಅಸಾಂಪ್ರದಾಯಿಕ ಇಂಧನ ಗುರಿ ಸಾಧನೆ

ಪಣಜಿ, ಜು. 21 - ಭಾರತ ಅಸಾಂಪ್ರದಾಯಿಕ ಮೂಲಗಳಿಂದ ಶೇ.43.6ರಷ್ಟು ಇಂಧನ ಪಡೆಯುವ ಗುರಿಯನ್ನು ನಿಗದಿಗೆ ಮುಂಚೆಯೇ ತಲುಪಿದೆ ಎಂದು ಕೇಂದ್ರ ಸಚಿವ ಆರ್.ಕೆ. ಸಿಂಗ್ ತಿಳಿಸಿದ್ದಾರೆ. 2030ರ ವೇಳೆಗೆ ಈ ಗುರಿ ತಲುಪಬೇಕಿತ್ತು. ಒಂಭತ್ತು ವರ್ಷ ಮೊದಲೇ ಭಾರತ ಅಸಾಂಪ್ರದಾಯಿಕ ಮೂಲಗಳಿಂದ ಶೇ.43.6ರಷ್ಟು ಇಂಧನ ಪಡೆಯುತ್ತಿದೆ. ಒಟ್ಟು 421 ಜಿ.ಡಬ್ಲ್ಯೂ. ಇಂಧನ ಸಾಮರ್ಥ್ಯದಲ್ಲಿ 183 ಗಿಗಾವ್ಯಾಟ್ ಅಸಾಂಪ್ರದಾಯಿಕ ಮೂಲಗಳಿಂದ ಬರುತ್ತಿದೆ. ಇನ್ನೂ 88 ಜಿ.ಡಬ್ಲ್ಯೂ. ಅಳವಡಿಕೆ ನಡೆಯುತ್ತಿದೆ ಹಾಗೂ 55 ಜಿ.ಡಬ್ಲ್ಯೂ.ಗೆ ಟೆಂಡರ್ ಕರೆಯಲಾಗಿದೆ. ಭಾರತ ಪ್ರತಿ ವರ್ಷ 50 ಜಿ.ಡಬ್ಲ್ಯೂ. ಇಂಧನ ಸಾಮರ್ಥ್ಯ ಹೆಚ್ಚಿಸಿಕೊಳ್ಳಲಿದೆ ಎಂದು ಸಿಂಗ್ ತಿಳಿಸಿದ್ದಾರೆ.

## ಚುನಾವಣಾ ಆಮಿಷ

**(1ನೇ ಪುಟದಿಂದ)** ಕೇಳಿದ ಪ್ರತಿಯೊಬ್ಬರೂ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ. ಆದರೆ, ಸಿದ್ದರಾಮಯ್ಯ ಅವರನ್ನು ಉದಾಹರಣೆ ರೂಪವಾಗಿ ಪ್ರತಿವಾದಿ ಮಾಡಲಾಗಿದೆ ಎಂದಿದ್ದಾರೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಯಾರ ಹೆಸರಿದೆಯೋ ಅವರೆಲ್ಲರೂ ಜನಪ್ರತಿನಿಧಿ ಕಾಯ್ದೆ ಉಲ್ಲಂಘನೆಯಲ್ಲಿ ಭಾಗಿಯಾಗಿದ್ದಾರೆ ಎಂದು ಅರ್ಜಿದಾರರು ಹೇಳಿದ್ದಾರೆ.

# ಸುಳ್ಳು ಆರೋಪ, ನೌಕರರ ವಿರುದ್ಧ ಕ್ರಮಕ್ಕೆ ಮನವಿ




**ಹರಿಹರ**

ಹರಿಹರ, ಜು. 21 - ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಹಾಗೂ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಶಾಖೆಗಳ ಮೇಲೆ ಕೆಲ ನೌಕರರು ಸುಳ್ಳು ಆರೋಪ ಮಾಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ, ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದಿಂದ ತಹಶೀಲ್ದಾರ್ ಶಶಿಧರಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಗೌರವಾಧ್ಯಕ್ಷ ಎಂ. ಉಮ್ಮಣ್ಣ, ಖಜಾಂಚಿ ರೇವಣ ಸಿದ್ದಪ್ಪ ಅಂಗಡಿ, ಎಂ.ಬಿ. ಮಂಜು ನಾಥ್, ಪ್ರಕಾಶ್, ಶೋಭಾ, ನಾರಾಯಣ ರೆಡ್ಡಿ, ಡಿ.ಟಿ. ಮಂಜಪ್ಪ, ವಿಜಯಪ್ರಕಾಶ್, ಮಂಜುನಾಥ್, ಮಹಮ್ಮದ್ ರಫಿ, ತುಕಾರಾಂ, ಹೇಮಂತ್ ಕುಮಾರ್, ಸೋಮಶೇಖರ್, ನರಸಮ್ಮ, ಸೌಮ್ಯ, ಉಮೇಶ್, ಆರಿಫ್ ಮತ್ತಿತರರು ಉಪಸ್ಥಿತರಿದ್ದರು.

## ನೈಸ್ ಯೋಜನೆ ವಶಕ್ಕೆ ಪಡೆಯಲು ಆಗ್ರಹ

**(1ನೇ ಪುಟದಿಂದ)** ಯಾವ ಮುಲಾಜು ಇಲ್ಲದೆ ಸರ್ಕಾರದ ವಶಕ್ಕೆ ಪಡೆಯಬೇಕು ಹಾಗೂ ಉನ್ನತ ಮಟ್ಟದ ತನಿಖೆ ನಡೆಯಬೇಕು ಎಂದು ಆಗ್ರಹಪಡಿಸಿದರು. ಜಂಟಿ ಸದನ ಸಮಿತಿ ವರದಿಯ ಪ್ರಕಾರ ಹಾಗೂ ನ್ಯಾಯಾಲಯಗಳು ನೀಡಿರುವ ಆದೇಶದಂತೆ ಆ ಇಡೀ ಯೋಜನೆಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಒತ್ತಾಯಿಸಿದರು. ಒಂದು ವೇಳೆ ಯೋಜನೆಯನ್ನು ವಶಕ್ಕೆ ಪಡೆಯದಿದ್ದರೆ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಸದನದ ಒಳಗೆ - ಹೊರಗೆ ಜಂಟಿ ಹೋರಾಟ ನಡೆಸಲಿವೆ ಎಂದು ಇಬ್ಬರೂ ನಾಯಕರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

# ಕೊರೊನಾ ನಂತರ ಹಠಾತ್ ಸಾವು

## ಕೇಂದ್ರೀಯ ಸಂಸ್ಥೆಯಿಂದ ಮೂರು ಪ್ರತ್ಯೇಕ ಅಧ್ಯಯನ

ನವದೆಹಲಿ, ಜು. 21 - ಕೊರೊನಾ ನಂತರ ಕೆಲ ಯುವಕರು ಹಠಾತ್ ಸಾವನ್ನಪ್ಪಿರುವುದು ಕಂಡು ಬಂದಿದೆ. ಆದರೆ, ಇದಕ್ಕೆ ಕಾರಣವೇನು ಎಂಬುದಕ್ಕೆ ಸ್ಪಷ್ಟ ಸಾಕ್ಷಿಗಳು ದೊರೆತಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಸಂಸತ್ತಿಗೆ ತಿಳಿಸಿದ್ದಾರೆ.

ಕೊರೊನಾ ನಂತರ ಹೃದ್ರೋಗ ಸಮಸ್ಯೆಗಳು ಹೆಚ್ಚಾಗುತ್ತಿರುವ ಬಗ್ಗೆ ತಿಳಿಯಲು ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ ಮೂರು ವಿಭಿನ್ನ ಅಧ್ಯಯನ ನಡೆಸಿದೆ ಎಂದು ಮಾಂಡವೀಯ ಲೋಕಸಭೆಗೆ ತಿಳಿಸಿದ್ದಾರೆ. 18ರಿಂದ 45 ವರ್ಷದ ವಯಸ್ಸಿನವರಲ್ಲಿ ಹಠಾತ್ ಸಾವು ಸಂಭವಿಸುವುದಕ್ಕೆ ಹಲವಾರು ಕಾರಣಗಳಿವೆ. ಈ ಬಗ್ಗೆ ದೇಶದ 40 ಆಸ್ಪತ್ರೆಗಳು ಹಾಗೂ ಸಂಶೋಧನಾ ಕೇಂದ್ರಗಳಲ್ಲಿ ಅಧ್ಯಯನ ನಡೆಸಲಾಗುತ್ತಿದೆ ಎಂದವರು ತಿಳಿಸಿದ್ದಾರೆ. ಕೊರೊನಾ ಸಂಬಂಧ 30 ಆಸ್ಪತ್ರೆಗಳಲ್ಲಿ ಅಧ್ಯಯನ ನಡೆಸಲಾಗುತ್ತಿದೆ. ಇದಲ್ಲದೇ, ಯುವಕರಲ್ಲಿ ಹಠಾತ್ ಸಾವುಗಳು ಸಂಭವಿಸುತ್ತಿರುವ ಬಗ್ಗೆ ಮರಣೋತ್ತರ ಪರೀಕ್ಷೆಗಳ ಮತ್ತೊಂದು ಅಧ್ಯಯನ ನಡೆಯುತ್ತಿದೆ ಎಂದು ಮಾಂಡವೀಯ ಹೇಳಿದ್ದಾರೆ.

# ಜಿಲ್ಲೆಯಲ್ಲಿ 'ಗೃಹಲಕ್ಷ್ಮಿ' ಯೋಜನೆ ನೋಂದಣಿಗೆ ಚಾಲನೆ

**(1ನೇ ಪುಟದಿಂದ)** ನೋಂದಣಿ ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕು. ಕಾರಣಾಂತರಗಳಿಂದ ಆಧಾರ್ ಲಿಂಕ್ ಆಗದೇ ಇರುವ ಯಜಮಾನಿಯ ಬ್ಯಾಂಕ್‌ಖಾತೆಗೆ ಹಣ ಸಂದಾಯವಾಗಬೇಕೆಂದು ಬಯಸಿದ್ದಲ್ಲಿ, ಆ ಬ್ಯಾಂಕ್ ಖಾತೆಯ ಪಾಸ್ ಪುಸ್ತಕವನ್ನು ತೆಗೆದುಕೊಂಡು ಹೋಗಿ ದಾಖಲೆ ನೀಡಿ ನೋಂದಣಿ ಮಾಡಿಸಬೇಕು.

ಗೃಹ ಲಕ್ಷ್ಮಿ ಯೋಜನೆಯ ನೋಂದಣಿಗಾಗಿ ಅರ್ಹ ಫಲಾನುಭವಿಯ ಮೊಬೈಲ್‌ಗೆ ಅವರು ಯಾವ ದಿನ ಅರ್ಜಿ ನೋಂದಣಿಗಾಗಿ ನೋಂದಣಿ ಕೇಂದ್ರಕ್ಕೆ ಹೋಗಬೇಕೆಂದು ಸಂದೇಶವನ್ನು ಕಳುಹಿಸಲಾಗುತ್ತದೆ. ಅದರಂತೆ ತಮಗೆ ತಿಳಿಸಿದ ದಿನಾಂಕದಂದು ಫಲಾನುಭವಿಯು ನೋಂದಣಿ ಕೇಂದ್ರಕ್ಕೆ ಹೋಗಿ ದಾಖಲೆಗಳನ್ನು ನೀಡಿ ನೋಂದಣಿ ಮಾಡಿಸುವುದು. ವೇಳಾಪಟ್ಟಿಯನ್ನು ತಿಳಿಯಲು ಫಲಾನುಭವಿಗಳು ಉಚಿತ ದೂರವಾಣಿ ಸಂಖ್ಯೆ : 1902ಗೆ ಕರೆ ಮಾಡಿ ಮಾಹಿತಿ ತಿಳಿದುಕೊಳ್ಳಬಹುದು ಅಥವಾ ತಮ್ಮ ಪಡಿತರ ಚೀಟಿ ಸಂಖ್ಯೆಯನ್ನು 8147500500ಗೆ ಎಸ್.ಎಂ.ಎಸ್ ಮಾಡಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯವನ್ನು ತಿಳಿದುಕೊಳ್ಳಬಹುದು.

ಸುಗಮ ನೋಂದಣಿಗಾಗಿ ಈ ಕ್ರಮವನ್ನು ಅನುಸರಿಸಲಾಗುತ್ತಿದ್ದು ಫಲಾನುಭವಿಗಳು ಯಾವುದೇ ಆತಂಕಕ್ಕೆ ಒಳಗಾಗದೇ ಆತುರ ಮಾಡದೆ ತಾಳ್ಮೆಯಿಂದ ನೋಂದಣಿ ಮಾಡಿಸುವುದು. ಅರ್ಜಿ ನೋಂದಣಿಗಾಗಿ ಕೊನೆಯ ದಿನಾಂಕವನ್ನು ನಿಗದಿಪಡಿಸಿರುವುದಿಲ್ಲ.

ಸೌಲಭ್ಯ ಪಡೆಯಲು ಅಂತ್ಯೋದಯ, ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿಗಳಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿದ ಮಹಿಳೆ ಅರ್ಹರಾಗಿರುತ್ತಾರೆ. ಕುಟುಂಬದ ಯಜಮಾನಿ ಅಥವಾ ಆಕೆಯ ಪತಿ ಆದಾಯ ತೆರಿಗೆ ಸಲ್ಲಿಸುತ್ತಿದ್ದರೆ ಅಥವಾ ಜಿ.ಎಸ್.ಟಿ ರಿಟರ್ನ್ ಸಲ್ಲಿಸುತ್ತಿದ್ದರೆ ಅಂತಹ ಮಹಿಳೆ ಯೋಜನೆಗೆ ಅರ್ಹರಿರುವುದಿಲ್ಲ. ಈ ಯೋಜನೆಯಡಿ ಲಿಂಗತ್ವ ಅಲ್ಪ ಸಂಖ್ಯಾತರು ಸಹ ಸೌಲಭ್ಯ ಪಡೆಯಬಹುದು. ನೋಂದಣಿ ನಂತರ ಸ್ವೀಕೃತಿಯನ್ನು ಎಸ್.ಎಂ.ಎಸ್ ಮೂಲಕ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೀ ಧಾರಾವಾಹಿಗಳಿಗೆ ಜನರಿಂದ ಉತ್ತಮ ಸ್ಪಂದನೆ



## ದಾವಣಗೆರೆಯಲ್ಲಿ ಜೀ ಕುಟುಂಬ ಸದಸ್ಯರ ಸಂತಸ

ದಾವಣಗೆರೆ, ಜು. 21- ಜೀ ಕನ್ನಡ ಜಾತ್ರೆ ಕಲ್ಯಾಣೋತ್ಸವ ಕಾರ್ಯಕ್ರಮ ಶುಕ್ರವಾರ ಸಂಜೆ ನಗರದ ಶ್ರೀ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಇದಕ್ಕೂ ಮುನ್ನ ಜೀ ಕನ್ನಡದಲ್ಲಿ ಪ್ರಸಾರವಾಗುವ ಪುಟ್ಟಕ್ಕನ ಮಕ್ಕಳು, ಅಮೃತಧಾರೆ ಹಾಗೂ ಶ್ರೀರಸ್ತು ಶುಭಮಸ್ತು ಧಾರಾವಾಹಿಗಳ ಕಲಾವಿದರು ಪತ್ರಕರ್ತರೊಂದಿಗೆ ಮಾತನಾಡುತ್ತಾ, ದಾವಣಗೆರೆಗೆ ಆಗಮಿಸಿದ್ದು ಸಂತಸ ತಂದಿದೆ ಎಂದರು.

ಶ್ರೀರಸ್ತು ಶುಭಮಸ್ತು ಧಾರಾವಾಹಿಯ ತುಳಸಿ ಪಾತ್ರಧಾರಿ ಹಿರಿಯ ನಟಿ ಸುಧಾರಾಣಿ ಮಾತನಾಡುತ್ತಾ, ಬಹಳ ವರ್ಷಗಳ ನಂತರ ಕಿರುತೆರೆಗೆ ಕಾಲಿಟ್ಟಿದ್ದೇನೆ. ಧಾರಾವಾಹಿ ಬಗ್ಗೆ ಉತ್ತಮ ಪ್ರತಿಕ್ರಿಯೆಗಳು ಬರುತ್ತಿರುವುದು ಸಂತಸ ತಂದಿದೆ. ಇದರಲ್ಲಿನ ಪಾತ್ರಗಳು ಅನೇಕರಿಗೆ ನಿಜ ಜೀವನಕ್ಕೆ ಹತ್ತಿರವಾದಂತಿವೆ ಎಂದರು.

ಮಾಧವ ಪಾತ್ರಧಾರಿ ಅಜಿತ್ ಮಾತನಾಡುತ್ತಾ, ಕಿರಿಯನಾದರೂ ಹಿರಿಯ ಪಾತ್ರ ಮಾಡುವಲ್ಲಿ ಜವಾಬ್ದಾರಿ ಹೆಚ್ಚಾಗಿರುತ್ತದೆ. ಅದನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದೇನೆ. ಜನರಿಂದ ಬರುತ್ತಿರುವ ಉತ್ತಮ ಸ್ಪಂದನೆ ಖುಷಿ ತಂದಿದೆ ಎಂದರು.

ಜೀ ವಾಹಿನಿಯ ಪೃಥ್ವಿರಾಜ್ ಮಾತನಾಡುತ್ತಾ, ಮೂರೂ ಧಾರಾವಾಹಿಗಳಲ್ಲಿ ಮದುವೆ ಪ್ರಮುಖ ಪಾತ್ರ ವಹಿಸುತ್ತದೆಯಾದ್ದರಿಂದ ಕಾರ್ಯಕ್ರಮಕ್ಕೆ ಕಲ್ಯಾಣೋತ್ಸವ ಎಂದು ಹೆಸರಿಡಲಾಗಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಎಲ್ಲಾ ಧಾರಾವಾಹಿಗಳ ಬಗ್ಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ಜನರೊಂದಿಗೆ ನೇರವಾಗಿ ಬೆರೆತು ಸ್ಪಂದನೆ ಬಗ್ಗೆ ತಿಳಿಯುವ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಅಮೃತಧಾರೆಯ ಭೂಮಿಕಾ ಪಾತ್ರದಲ್ಲಿನ ಛಾಯಾ ಸಿಂಗ್, ಗೌತಮ್ ಪಾತ್ರಧಾರಿ ರಾಜೇಶ್ ನಟರಂಗ, ಪುಟ್ಟಕ್ಕನ ಮಕ್ಕಳು ಧಾರಾವಾಹಿಯ ಧನುಷ್ (ಕಂಠಿ), ಸಂಜನಾ (ಸ್ನೇಹ) ಸೇರಿದಂತೆ, ಕಲಾವಿದರುಗಳಾದ ಸದಾನಂದ, ಪವನ್ ಕುಮಾರ್, ಅಕ್ಷರ, ಸುಶ್ಮಿತಾ, ಗಜೇಂದ್ರ, ಪ್ರವೀಣ್, ಅನಿರಿಶ್, ಶಾರ್ವರಿ, ಸಂಧ್ಯಾ, ನಿಧಿ, ಲಾವಣ್ಯ, ಅಜಿತ್ ಇತರರು ಉಪಸ್ಥಿತರಿದ್ದು ಅನಿಸಿಕೆಗಳನ್ನು ಹಂಚಿಕೊಂಡರು.


**ಪ್ರಾಚಾರ್ಯರ ಕಛೇರಿ, ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು**

ದಾವಣಗೆರೆ - 577004.

ಆಫೀಸ್ : ಫೋ. : 08192-233414, FAX : 08912 233412

**ಹರಾಜು ಪ್ರಕಟಣೆ** ದಿನಾಂಕ : 15.07.2023

ವಿಷಯ : ನಿರುಪಯುಕ್ತ ವಾಹನಗಳು, ಸಾಮಗ್ರಿಗಳು ಹಾಗೂ ಹಳೆಯ ಉಪಕರಣಗಳು ಸಾರ್ವಜನಿಕವಾಗಿ ಬಹಿರಂಗ ಹರಾಜು ಮೂಲಕ ಹರಾಜು ಮಾಡುವ ಬಗ್ಗೆ.

**ಉಲ್ಲೇಖ : 1. ಮಾನ್ಯ ಕುಲಪತಿಗಳು, ಆದೇಶ ದಿನಾಂಕ : 03.05.2023**

**2. ಯುಬಿಡಿಟಿ ಕಛೇರಿಯ ಸಂಖ್ಯೆ : ಯುಬಿಡಿಟಿ/ಎಸ್.ಪಿ.ಎಸ್/2023-24 ದಿನಾಂಕ 26.04.2023**

ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಕಛೇರಿಯ ವ್ಯಾಪ್ತಿಗೆ ಒಳಪಟ್ಟಿರುವ ಕೇಂದ್ರದ ನಿರುಪಯುಕ್ತ ವಾಹನಗಳು, ಸಾಮಗ್ರಿಗಳು ಹಾಗೂ ಹಳೆಯ ಉಪಕರಣಗಳು ಸಾರ್ವಜನಿಕವಾಗಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಿದ್ದು, ಕೆಳಗಿನ ನಿರ್ಬಂಧನೆಗೊಳಪಟ್ಟು ಸಾರ್ವಜನಿಕ ಹರಾಜು ಪ್ರಕ್ರಿಯೆಯಲ್ಲಿ ನಿಗದಿ ಪಡಿಸಿದ ದಿನಾಂಕದಂದು ಭಾಗವಹಿಸಬಹುದು.

| ಕ್ರ.ಸಂ. | ವಿವರಗಳು | ಉಪಕರಣಗಳ ವಿವರ | ಇ.ಎಂ.ಡಿ. ಮೊತ್ತ ರೂ.ಗಳಲ್ಲಿ |
|---|---|---|---|
| 01 | KA-17 G-8 Metedor | 01 | |
| 02 | KA-17 G-1 Jeep, KA-17 G-2 Trailer | 01 | |
| 03 | Old Chair & Tabels Generator Acoustic Etc. | lumpsum Per/Kg | |
| 04 | Old Water Tank and tress (Dismanteled) | lumpsum Per/Kg | |
| 05 | Old Water Tank behind FM Lab | 01 | |
| 06 | ಪರಿವೀಕ್ಷಣೆ ದಿನಾಂಕ ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ | | 17.07.2023ರಿಂದ 26.07.2023, 4.30ರವರೆಗೆ |
| 07 | ಬಹಿರಂಗ ಹರಾಜಿನ ಸಮಯ ಮತ್ತು ದಿನಾಂಕ | | 27.07.2023 11.30 (ಗುರುವಾರ) |

**ಸೂಚನೆ : ಹೆಚ್ಚಿನ ವಿವರಗಳಿಗೆ ಹಾಗು ಸಾಮಾನ್ಯ ನಿಯಮ ಷರತ್ತುಗಳಿಗೆ ಈ ಕಛೇರಿಯಿಂದ ಮಾಹಿತಿಯನ್ನು ಪಡೆದುಕೊಳ್ಳತಕ್ಕದ್ದು.**

**ಸಂಕ್ಷಿಪ್ತ ಷರತ್ತು ಮತ್ತು ನಿಬಂಧನೆಗಳು : 1)** ಸಾಮಾನ್ಯ ಷರತ್ತು ಮತ್ತು ನಿಬಂಧನೆಯನ್ನು ಪ್ರತ್ಯೇಕವಾಗಿ ವಿತರಿಸಿದ್ದು, ವಿವರಣೆಗಳಿಗಾಗಿ ಕಛೇರಿಯಲ್ಲಿ ಸಂಪರ್ಕಿಸಬಹುದು. **2)** ಮೊಹರ ಬಂದ್ ಲಕೋಟೆಯಲ್ಲಿ ಭಾಗವಹಿಸಲು ಇಚ್ಚಿಸುವ ಬಿಡ್ಡುದಾರರು ಪ್ರಕಟಣೆಯಲ್ಲಿ ನಿಗದಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಪೂರ್ಣ ವಿವರಗಳೊಂದಿಗೆ ಇ.ಎಂ.ಡಿ. ರೂ. 50,000/- (ರೂ. ಐವತ್ತು ಸಾವಿರ ಮಾತ್ರ)ಗಳನ್ನು ಸ್ಥಳೀಯ ಬ್ಯಾಂಕಿನ ಡಿ.ಡಿ. ಮೂಲಕವೇ ಪ್ರಾಚಾರ್ಯರು ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಹೆಸರಿನಲ್ಲಿ ಸಲ್ಲಿಸತಕ್ಕದ್ದು, ಚೆಕ್ ಅಥವಾ ಇತರೆ ಮೂಲಕ ಸ್ವೀಕರಿಸಲಾಗುವುದಿಲ್ಲ. ಇ.ಎಂ.ಡಿ. ಮೊಬಲಗನ್ನು ಡಿ.ಡಿ. ಮುಖಾಂತರ ಸಲ್ಲಿಸಿ ಮೊಹರಬಂದ್ ಲಕೋಟೆ ಪಡೆಯುವುದು. ಮೊಹರ್‌ಬಂದ್ ಲಕೋಟಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಬಹಿರಂಗ ಹರಾಜಿನ ದಿನಾಂಕ 27.07.2023ರಂದು ಬೆಳಿಗ್ಗೆ 11.30ಕ್ಕೆ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ನಡೆಸಲಾಗುವುದು. **3)** ದಿನಾಂಕ 27.07.2023ರಂದು ಬೆಳಿಗ್ಗೆ 11.30ಕ್ಕೆ ಮೊಹರ್‌ಬಂದ್ ಲಕೋಟೆದಾರರು ಸಹ ಬಹಿರಂಗ ಹರಾಜಿನಲ್ಲಿ ಭಾಗವಹಿಸಬೇಕಾದಲ್ಲಿ ಈಗಾಗಲೇ ಲಕೋಟೆಯೊಂದಿಗೆ ಸಲ್ಲಿಸಿದ ಇ.ಎಂ.ಡಿ. ಮೊಬಲಗಿನ ವಿವರಗಳ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಬೇಕು. **4)** ಯಶಸ್ವೀ ಮೊಹರ್‌ಬಂದ್ ಲಕೋಟೆ/ಹರಾಜು ಬಿಡ್ಡುದಾರರು ಬಿಡ್ ಮೊತ್ತದ ಶೇಕಡ 50ರಷ್ಟು ಹಾಗೂ ತೆರಿಗೆಗಳನ್ನು ಪ್ರತ್ಯೇಕವಾಗಿ ಸ್ಥಳದಲ್ಲೇ ಹರಾಜು ಆದ ದಿನವೇ ಪಾವತಿ ಮಾಡಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಇ.ಎಂ.ಡಿ. ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಯಶಸ್ವಿಯಾಗದ ಬಿಡ್ಡುದಾರರಿಗೆ ಅವರ ಇ.ಎಂ.ಡಿ. ಮೊಬಲಗನ್ನು ಅದೇ ದಿನ ಹಿಂತಿರುಗಿಸಲಾಗುವುದು. **5)** ಮೊಹರಬಂದ್ ಲಕೋಟೆ/ಬಹಿರಂಗ ಹರಾಜಿನಲ್ಲಿ ಯಶಸ್ವಿಯಾದವರ ಪ್ರಸ್ತಾವನೆಯು ಸಕ್ಷಮ ಪ್ರಾಧಿಕಾರದ ಅಧಿಕಾರಿಗಳಿಂದ ಯಾವುದೇ ಕಾರಣಗಳಿಗಾಗಿ ಅನುಮೋದನೆಯಾಗದೇ ತಿರಸ್ಕೃತವಾದಲ್ಲಿ ಈಗಾಗಲೇ ಸಂದಾಯ ಮಾಡಲಾದ ಶೇಕಡಾ 50ರಷ್ಟು ಹಣ ಹಾಗೂ ಇ.ಎಂ.ಡಿ. ಮೊಬಲಗನ್ನು ಹಿಂತಿರುಗಿಸಲಾಗುವುದು. ಆದರೆ ಈ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. **6)** ಆಸಕ್ತಿಯುಳ್ಳವರು ಮೇಲೆ ಹೇಳಿರುವ ಎರಡೂ ವಾಹನಗಳನ್ನು (ವಾಹನಗಳು ಇರುವ ಸ್ಥಳದಲ್ಲಿ) ರಜಾ ದಿನಗಳಲ್ಲಿ ಹೊರತುಪಡಿಸಿ ಉಳಿದ ದಿನಗಳಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ ವೀಕ್ಷಿಸಬಹುದು. **7)** ಪ್ರಕಟಣೆಯಲ್ಲಿ ಸೂಚಿಸಿದ ಯಾವುದೇ ದಿನಾಂಕಗಳನ್ನು ರಜಾ ದಿನಗಳೆಂದು ಘೋಷಿಸಿದಲ್ಲಿ ಅದರ ಮುಂದಿನ ಕೆಲಸದ ದಿನಗಳನ್ನು ಪರಿಗಣಿಸಬಹುದುದಾಗಿದೆ. **8)** ಸಕ್ಷಮ ಅಧಿಕಾರಗಳು ಯಾವುದೇ ಕಾರಣಗಳನ್ನು ನೀಡದೇ ಹಾಗೂ ಯಾವುದೇ ಕಾನೂನಿಗೆ ಬದ್ಧವಾಗದೇ ಮೊಹರ್‌ಬಂದ್ ಲಕೋಟೆ/ಬಹಿರಂಗ ಹರಾಜು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ. **9)** ಹೆಚ್ಚಿನ ವಿವರಣೆಗಳಿಗೆ ಕಛೇರಿಯ ಕೆಲಸದ ದಿನಗಳಂದು ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 08192-233414. **10)** ಯಾವುದೇ ಅಹಿತಕರ ಘಟನೆ ಸಂಭವಿಸದಲ್ಲಿ ಮೇಲ್ಕಂಡ ಮೊಹರ್‌ಬಂದ್ ಲಕೋಟೆ ಹಾಗೂ ಹರಾಜಿನ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದು ಮಾಡುವ ಅಧಿಕಾರವು ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ. **11)** ಯಶಸ್ವಿ ಬಿಡ್‌ದಾರರಿಗೆ ಯಂತ್ರೋಪಕರಣಗಳನ್ನು ವಶಕ್ಕೆ ತೆಗೆದುಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಈ ಕಚೇರಿಯಿಂದ ಪ್ರತ್ಯೇಕ ಕಾರ್ಯಾದೇಶವನ್ನು ನೀಡಲಾಗುವುದು. ಕಾರ್ಯಾದೇಶ ನೀಡಿದ ದಿನದೊಳಗೆ ಬಾಕಿ ಮೊತ್ತವನ್ನು ಪಾವತಿಸಿ ಯಂತ್ರೋಪಕರಣಗಳನ್ನು ವಶಕ್ಕೆ ತೆಗದುಕೊಂಡು ತೆರವುಗೊಳಿಸುವುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳಿಗೆ ಅವಕಾಶಗಳು ಇರುವುದಿಲ್ಲ.

ಸಹಿ/- **ಡೀನರು, ಕಟ್ಟಡ ಅಭಿವೃದ್ಧಿ ವಿಭಾಗ,**
**ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ.**

# ಮಹಿಳೆಯರಿಗೆ ರಕ್ಷಣೆ ನೀಡದ ಮಣಿಪುರ ಸರ್ಕಾರವನ್ನು ಕಿತ್ತು ಹಾಕುವಂತೆ ಆಗ್ರಹ

ದಾವಣಗೆರೆ, ಜು. 21- ಮಣಿಪುರದಲ್ಲಿ ಮಹಿಳೆಯನ್ನು ನಗ್ನಗೊಳಿಸಿ ಬೆತ್ತಲೆ ಮೆರವಣಿಗೆ ಮಾಡಿರುವ ಘಟನೆ ಖಂಡನೀಯವಾಗಿದ್ದು, ಶಾಂತಿ ಸುವ್ಯವಸ್ಥೆ ಕಾಪಾಡಲು ವಿಫಲವಾಗಿರುವ ಮಣಿಪುರ ಸರ್ಕಾರವನ್ನು ರಾಷ್ಟ್ರಪತಿಗಳು ಕಿತ್ತು ಹಾಕಬೇಕು ಎಂದು ಕೆಪಿಸಿಸಿ ರಾಜ್ಯ ವಕ್ತಾರ ಡಿ.ಬಸವರಾಜ್ ಆಗ್ರಹಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೊಂದು ದೇಶವೇ ತಲೆ ತಗ್ಗಿಸುವಂತಹ ಘಟನೆಯಾಗಿದೆ. ಪ್ರಧಾನಿ ಮೋದಿ ಘಟನೆ ನಡೆದಿರುವ ಕುರಿತು ದೇಶದ ಕ್ಷಮೆ ಯಾಚಿಸಬೇಕು. ಮಹಿಳೆಯ ರಕ್ಷಣೆಗೆ ಸುಪ್ರೀಂ ಕೋರ್ಟ್ ಧಾವಿಸಬೇಕು ಎಂದು ಒತ್ತಾಯಿಸಿದರು.

ರೋಮ್ ಹೊತ್ತಿ ಉರಿಯುವಾಗ ದೊರೆ ನೀರೋ ಪಿಟೀಲು ಭಾರಿಸುತ್ತಿದ್ದ ಎಂಬಂತೆ ಮಣಿಪುರದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದ್ದರೆ, ಪ್ರಧಾನಿ ಮೋದಿ ಅಧಿಕಾರದ ಆಸೆಗಾಗಿ ಕರ್ನಾಟಕದ ಉಡುಪಿಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು ಎಂದು ಬಸವರಾಜ್ ಆರೋಪಿಸಿದರು.

ದೇಶದಲ್ಲಿ ಮಹಿಳೆಯರಿಗೆ ಶೇ.1ರಷ್ಟು ಸುರಕ್ಷತೆಯಿಲ್ಲವಾಗಿದೆ. ಮಣಿಪುರ ಘಟನೆಗೆ ಸಂಬಂಧಿಸಿದಂತೆ ಮೋದಿ ಜಾಣ ಕಿವುಡು ಪ್ರದರ್ಶಿಸುತ್ತಿದ್ದಾರೆ. ಇಂತಹ ಪ್ರಧಾನ ಮಂತ್ರಿ ಪಡೆದಿರುವುದು ದೇಶದ ದೌರ್ಭಾಗ್ಯ ಎಂದು ಹೇಳಿದರು.

ಮಣಿಪುರದ ಘಟನೆ ನಡೆದ ಮೇಲೂ ಬಿಜೆಪಿಯ ಪ್ರಭಾವಿ ಮಹಿಳಾ ಸಚಿವರುಗಳಾದ ನಿರ್ಮಲಾ ಸೀತಾರಾಮನ್, ಸ್ಮೃತಿ ಇರಾನಿ, ಶೋಭಾ ಕರಂದ್ಲಾಜೆ ಏಕೆ ರಾಜ್ಯ ಹಾಗೂ ಕೇಂದ್ರದ ಆಡಳಿತ ವೈಫಲ್ಯದ ಬಗ್ಗೆ ಮಾತನಾಡುತ್ತಿಲ್ಲ? ಇವರು ಕೇವಲ ಬೂಟಾಟಿಕೆ ಮಾಡುತ್ತಿದ್ದಾರೆ ಎಂದು ಬಸವರಾಜ್ ಲೇವಡಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಂ. ಮಂಜುನಾಥ್, ನಂಜಾನಾಯ್, ಬಿ.ಎನ್. ವಿನಾಯಕ, ಎಂ.ಕೆ. ಲಿಯಾಖತ್ ಅಲಿ, ಗುರುಮೂರ್ತಿ, ಫಾರೂಕ್, ಬಸವರಾಜ್, ನವೀನ್ ಇತರರು ಉಪಸ್ಥಿತರಿದ್ದರು.

## ಮಹಿಳೆಯ ಬೆತ್ತಲೆ ಮೆರವಣಿಗೆ: ಪ್ರಧಾನಿ, ಗೃಹ ಸಚಿವರ ರಾಜೀನಾಮೆಗೆ ಒತ್ತಾಯ

ದಾವಣಗೆರೆ, ಜು. 21- ಮಣಿಪುರದ ಜನಾಂಗೀಯ ಗಲಭೆ ಹಾಗೂ ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣದ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ಪ್ರಧಾನ ಮಂತ್ರಿ ಹಾಗೂ ಗೃಹ ಸಚಿವರು ತಕ್ಷಣ ರಾಜೀನಾಮೆ ನೀಡಬೇಕೆಂದು ಪೀಪಲ್ಸ್ ಲಾಯರ್ಸ್ ಗಿಲ್ಡ್ ರಾಜ್ಯ ಸಂಚಾಲಕ ಅನೀಸ್ ಪಾಷ ಒತ್ತಾಯಿಸಿದ್ದಾರೆ.

ಭಾರತದಂತಹ ಪ್ರಜಾಪ್ರಭುತ್ವ ದೇಶದಲ್ಲಿ ಪ್ರಜೆಗಳ ಅದರಲ್ಲೂ ಮಹಿಳೆಯರ ರಕ್ಷಣೆಯು ಸರ್ಕಾರದ ಮೇಲಿದೆ. ಇತ್ತೀಚೆಗೆ ಸುಮಾರು 79 ದಿನಗಳಿಂದ ಮಣಿಪುರದಲ್ಲಿ ಜನಾಂಗೀಯ ಗಲಭೆಗಳು ನಡೆಯುತ್ತಿದ್ದು, 150 ಕ್ಕೂ ಹೆಚ್ಚು ಜನರ ಬಲಿಯಾಗಿದೆ. 40 ಸಾವಿರ ಜನ ನಿರಾಶ್ರಿತರಾಗಿದ್ದಾರೆ ಹಾಗೂ ಕೋಟ್ಯಾಂತರ ನಷ್ಟವಾಗಿದೆ.

ಜನಾಂಗೀಯ ಗಲಭೆಯಿಂದ ಮಣಿಪುರ ಹೊತ್ತಿ ಉರಿಯುತ್ತಿದೆ. ಮೇ 18 ರಂದು ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ ಹೊಲಕ್ಕೆ ಕರೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ಮಾಡಲಾಗಿದೆ ಎಂದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಕೃತ್ಯ ಇಡೀ ಪ್ರಪಂಚದ ಮುಂದೆ ನಮ್ಮ ದೇಶ ತಲೆ ತಗ್ಗಿಸುವಂತಹದ್ದಾಗಿದೆ ಎಂದು ಹೇಳಿದ್ದಾರೆ.

ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿ ಚಾಟಿ ಬೀಸಿದ ನಂತರ ಎಚ್ಚೆತ್ತುಕೊಂಡ ಪ್ರಧಾನ ಮಂತ್ರಿಗಳು ಪತ್ರಕರ್ತರ ಮುಂದೆ ಹಾಜರಾಗಿ ಸಣ್ಣ ಹೇಳಿಕೆಯನ್ನು ನೀಡಿ, ಜನ ಸಾಮಾನ್ಯರು ಆಕ್ರೋಶಗೊಳ್ಳದಂತೆ ಕಣ್ಣೊರೆಸುವ ಕೆಲಸ ಮಾಡಿದ್ದಾರೆ. ಇದು ಖಂಡನೀಯ.

ದಂಗೆ ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ. ಪ್ರಧಾನಮಂತ್ರಿಗಳು ತಮ್ಮ ಪ್ರಜೆಗಳಿಗೆ ರಕ್ಷಣೆಯನ್ನು ನೀಡಲು ಕ್ರಮ ತೆಗೆದುಕೊಳ್ಳುವ ಬದಲಿಗೆ ನಿನ್ನೆಯವರೆಗೆ ಚಕಾರವೆತ್ತದೆ ಚುನಾವಣಾ ಪ್ರಚಾರದ ಪ್ರವಾಸದಲ್ಲಿ ನಿರತರಾಗಿರುವುದರಿಂದಲೇ ದುಷ್ಕೃತ್ಯಗಳು ಹೆಚ್ಚಾಗಲು ಕಾರಣವಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಾಂಗೀಯ ಗಲಭೆಗಳನ್ನು ಗಂಭೀರವಾಗಿ ಪರಿಗಣಿಸಿ, ತೀವ್ರ ಕ್ರಮ ಕೈಗೊಂಡಿದ್ದರೆ, ಅನಾಹುತಗಳು ನಡೆಯುತ್ತಿರಲಿಲ್ಲ.

ನಿರ್ಲಕ್ಷತನ ಮತ್ತು ತಪ್ಪಿಗೆ ನೈತಿಕ ಹೊಣೆಹೊತ್ತು ತಕ್ಷಣ ರಾಜಿನಾಮೆ ನೀಡಬೇಕು. ತಪ್ಪಿದ್ದಲ್ಲಿ ಇಡೀ ರಾಜ್ಯಾದ್ಯಂತ ಗಿಲ್ಡ್ ಇತರೆ ಸಂಘಟನೆಗಳೊಂದಿಗೆ ಸೇರಿ ಕಾನೂನಾತ್ಮಕವಾಗಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಅನೀಸ್ ಪಾಷ ಎಚ್ಚರಿಕೆ ನೀಡಿದ್ದಾರೆ.

## ಮಣಿಪುರದಲ್ಲಿ ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ: ಎಐಡಿಎಸ್‌ಓ ಖಂಡನೆ

ದಾವಣಗೆರೆ, ಜು.21- ಮಣಿಪುರದಲ್ಲಿ ಇಬ್ಬರು ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ ಮತ್ತು ಅತ್ಯಾಚಾರ ಪ್ರಕರಣವನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತೀವ್ರವಾಗಿ ಖಂಡಿಸಿದ್ದಾರೆ. ಘಟನೆಯು ಅತೀವ ಸಂಕಟ ಉಂಟು ಮಾಡಿದೆ. ಸಮುದಾಯದ ಹೆಸರಿನಲ್ಲಿ ಜನಗಳ ಸಾಮೂಹಿಕ ಹತ್ಯೆ, ದಾಳಿಗಳು, ಅತ್ಯಾಚಾರ, ಗುಂಪು ಅತ್ಯಾಚಾರ ಇವುಗಳು ಮಣಿಪುರದಲ್ಲಿ ಕಳೆದ ಎರಡು ತಿಂಗಳುಗಳಿಂದ ಎಡೆಬಿಡದೆ ನಡೆಯುತ್ತಿದ್ದು, ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ನೀತಿಗಳು, ಸಮುದಾಯಗಳ ನಡುವೆ ವಿಭಜನೆಯನ್ನು ಉಂಟು ಮಾಡಿ ಮಣಿಪುರ ಹೊತ್ತಿ ಉರಿಯಲು ಕಾರಣವಾಗಿದೆ ಎಂದಿದ್ದಾರೆ.

ಮಣಿಪುರದಲ್ಲಿ ನಡೆಯುತ್ತಿರುವ ಪ್ರಕ್ಷುಬ್ಧತೆಯನ್ನು ಬಿಜೆಪಿ ಸರ್ಕಾರ ಹೇಗೆ ನಿಭಾಯಿಸಿದೆ ಎನ್ನುವುದಕ್ಕೆ, ಆ ಹೆಣ್ಣುಮಕ್ಕಳ ಸ್ಥಿತಿಯೇ ಸಾಕ್ಷಿಯಾಗಿದೆ. ಸರ್ಕಾರವು ತನ್ನ ಅಜೆಂಡಾವನ್ನು ಮುಂದುವರಿಸಲು, ವೈಷಮ್ಯ ಸೃಷ್ಟಿಸಿ, ಆ ಮೂಲಕ ಸಮುದಾಯಗಳ ನಡುವಿನ ವಿಭಜನೆಯನ್ನು ಪ್ರೋತ್ಸಾಹಿಸಿದ್ದಾರೆ. ಸರ್ಕಾರದಿಂದ ಸಾಂತ್ವನದ ಮಾತುಗಳು ಅತ್ಯಂತ ಸಾಮಾನ್ಯ ರೀತಿಯದ್ದಾಗಿದ್ದು, ವಿಳಂಬವಾಗಿದೆ.

ಸಮುದಾಯದ ಹೆಸರಿನಲ್ಲಿ ಮಣಿಪುರದಲ್ಲಿ ನಡೆಯುತ್ತಿರುವ ಪ್ರತಿಯೊಂದು ಹಿಂಸಾಚಾರಗಳು ಮಾನವೀಯತೆ, ನಾಚಿಕೆಪಡುವಂತಹ ಸಂಗತಿಯಾಗಿದೆ ಎಂದು ಹೇಳಿದ್ದಾರೆ.

ಇವು ಸ್ವಯಂಪ್ರೇರಿತವಾಗಿ ನಡೆಯುವ ಘರ್ಷಣೆಗಳಲ್ಲ ಬದಲಿಗೆ ಆಳುವ ವರ್ಗದ ಕೈವಾಡ. ನೇತಾಜಿಯವರ ಐಎನ್‌ಎಯನ್ನು ಅಪಾರ ಗೌರವ ಮತ್ತು ದೇಶಭಕ್ತಿಯಿಂದ ಸ್ವಾಗತಿಸಿದ ರಾಜ್ಯ ಇಂತಹ ಸ್ಥಿತಿಗೆ ಬಂದಿರುವುದು ನೋವಿನ ಸಂಗತಿ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಐಎನ್‌ಎ ಸೈನಿಕರನ್ನು ಬೆಂಬಲಿಸಲು ಆ ನೆಲವು ಮಾನವೀಯತೆಯಿಂದ ಒಗ್ಗೂಡಿತ್ತು. ಇಂದಿಗೂ ದೇಶದ ಜನರು ನೇತಾಜಿಯನ್ನು ತಮ್ಮ ಹೃದಯದಲ್ಲಿ ಗೌರವಯುತವಾಗಿ ಇಟ್ಟುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಮಾನವತೆಯನ್ನು ಉಳಿಸಲು ಜನರೆಲ್ಲ ಮುಂದೆ ಬರಬೇಕೆಂದು ಎಐಡಿಎಸ್‌ಓ ಮನವಿ ಮಾಡುತ್ತದೆ. ಅನ್ಯರಲ್ಲಿ ಒಡಕುಗಳನ್ನು ಸೃಷ್ಟಿಸುವ ಸರ್ಕಾರಗಳ ವಿರುದ್ಧ ಒಗ್ಗಟ್ಟಿನಿಂದ ಹೋರಾಡಲು ಕರೆ ನೀಡಿದೆ ಎಂದು ತಿಳಿಸಿದ್ದಾರೆ.

## ಚೀನಾ ಫೋನ್ ಉತ್ಪಾದಕರಿಂದ 9 ಸಾವಿರ ಕೋಟಿ ರೂ. ತೆರಿಗೆ ವಂಚನೆ

ನವದೆಹಲಿ, ಜು. 21 - ಚೀನಾದ ಸ್ಮಾರ್ಟ್ ಫೋನ್ ಉತ್ಪಾದಕರು 9 ಸಾವಿರ ಕೋಟಿ ರೂ.ಗಳ ತೆರಿಗೆ ವಂಚನೆ ಮಾಡಿದ್ದಾರೆ ಎಂದು ಸಂಸತ್ತಿಗೆ ಮಾಹಿತಿ ನೀಡಲಾಗಿದೆ. ಎಲೆಕ್ಟ್ರಾನಿಕ್ಸ್ ಹಾಗೂ ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಈ ಮಾಹಿತಿ ನೀಡಿದ್ದು, 2018-19ರಿಂದ 2022-23ರ ನಡುವೆ ತೆರಿಗೆ ವಂಚನೆ ಪತ್ತೆಯಾಗಿದೆ. ಸರ್ಕಾರ ಇದುವರೆಗೂ ಕಂಪನಿಗಳಿಂದ 1,629.87 ಕೋಟಿ ರೂ. ವಸೂಲಿ ಮಾಡಿದೆ ಎಂದು ತಿಳಿಸಿದ್ದಾರೆ. ಓಪ್ಪೋ ಇಂಡಿಯಾ 5,086 ಕೋಟಿ ರೂ., ವಿವೊ 2,923.25 ಕೋಟಿ ರೂ. ಹಾಗೂ ಶಓಮಿ 682.51 ಕೋಟಿ ರೂ. ತೆರಿಗೆ ವಂಚನೆ ಮಾಡಿರುವುದು ಕಂಡು ಬಂದಿದೆ ಎಂದವರು ಹೇಳಿದ್ದಾರೆ.

## ವಿನೋಬನಗರದಲ್ಲಿನ ಬಾರ್ ಸ್ಥಳಾಂತರಕ್ಕೆ ನಿವಾಸಿಗಳ ಒತ್ತಾಯ

ದಾವಣಗೆರೆ, ಜು. 21- ಸ್ಥಳೀಯ ವಿನೋಬನಗರದ 3 ಹಾಗೂ 4ನೇ ಮುಖ್ಯ ರಸ್ತೆ ಬಳಿ ಇರುವ ಕೆ.ಎಸ್. ವೈನ್ ಲ್ಯಾಂಡ್ ಹೆಸರಿನ ಬಾರ್‌ನಿಂದಾಗಿ ತೀವ್ರ ತೊಂದರೆಯಾಗುತ್ತಿದ್ದು, ಕೂಡಲೇ ಬಾರ್ ಸ್ಥಳಾಂತರಗೊಳಿಸುವಂತೆ ಅಲ್ಲಿನ ನಿವಾಸಿಗಳು ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅನುಪಮಾ ರವಿಕುಮಾರ್, ಬಾರ್‌ಗೆ ಎಂಪಿಆರ್ ನಿಯಮದಡಿ ಪಾರ್ಸಲ್ ಮಾರಾಟಕ್ಕೆ ಮಾತ್ರ ಪರವಾನಿಗೆ ಇದೆ. ಆದರೆ, ಮಾಲೀಕರು ಅಲ್ಲಿಯೇ ಕುಡಿಯಲು ಅವಕಾಶ ನೀಡಿದ್ದಾರೆ. ಕುಡಿದು 3 ಹಾಗೂ 4ನೇ ಮುಖ್ಯ ರಸ್ತೆಯ ಅಡ್ಡರಸ್ತೆಗಳಲ್ಲಿ ಓಡಾಡಿ ಮನೆಗಳ ಮುಂದೆ ಮೂತ್ರ ವಿಸರ್ಜನೆ ಮಾಡುತ್ತಾ, ಬಾಟಲಿಗಳನ್ನು ಮನೆಗಳ ಮುಂದೆ ಬೀಸಾಕುತ್ತಾರೆ. ಯಾರಿಗಾದರೂ ಬುದ್ದಿ ಹೇಳಲು ಹೋದರೆ ಜಗಳಕ್ಕೆ ಬರುತ್ತಾರೆ ಎಂದು ಆರೋಪಿಸಿದರು. ಈ ಹಿಂದೆ ಬಾರ್ ಅನ್ನು ಬೇರೆ ಜಾಗಕ್ಕೆ ವರ್ಗಾಯಿಸಲು ಕೇಳಿದಾಗ ಆರು ತಿಂಗಳ ಗಡುವ ಕೊಟ್ಟಿದ್ದರು. ಈಗ ಮತ್ತೆ ಅಬಕಾರಿ ಅಧಿಕಾರಿಗಳು ಬಾರ್‌ನ ಪರವಾನಿಗೆ ನವೀಕರಿಸಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಬಾರ್ ಸ್ಥಳಾಂತರಿಸದಿದ್ದರೆ ಅಲ್ಲಿನ ನಿವಾಸಿಗಳೊಂದಿಗೆ ಬಾರ್ ಮುಂದೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ವಿನೋಬನಗರದ ನಿವಾಸಿಗಳಾದ ವಿಜಯಲಕ್ಷ್ಮಿ, ನಿರಂಜನ್, ಅನಿತಾ ಬಸವಲಿಂಗಪ್ಪ, ಶಂಶಾದ್ ಸೈಫುಲ್ಲಾ, ಭಾಗೀರಥಿ ಪಾಂಡುರಂಗ ಇತರರು ಉಪಸ್ಥಿತರಿದ್ದರು.

## ಆಕಾಶ್ ಬೈಜೂಸ್‌ನಿಂದ ಮಾರ್ಗದರ್ಶನ

ದಾವಣಗೆರೆ, ಜು. 21- ಆಕಾಶ್ ಬೈಜೂಸ್ ದಾವಣಗೆರೆ ವತಿಯಿಂದ ಉಚಿತವಾಗಿ ನೀಟ್ ಸೀಟ್ ಅಲಾಟ್ಮೆಂಟ್ ಆಯ್ಕೆ ಹಾಗೂ ಕೆ ಸಿ ಟಿ ಕೌನ್ಸಿಲಿಂಗ್ ಸೀಟ್ ಆಯ್ಕೆಗಳ ಬಗ್ಗೆ ಮಾರ್ಗದರ್ಶನ ನೀಡಲಾಗುವುದು ಎಂದು ಬ್ರ್ಯಾಂಚ್ ಹೆಡ್ ಸಿ. ಶಿವರಾಜು (92890 54591, 92892 52001) ತಿಳಿಸಿದ್ದಾರೆ.

## ನಾಗರಸನಹಳ್ಳಿಯಲ್ಲಿ ಇಂದು ರಂಭಾಪುರಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ



ದಾವಣಗೆರೆ ತಾಲ್ಲೂಕಿನ ನಾಗರಸನಹಳ್ಳಿಯಲ್ಲಿ ನಡೆಯುತ್ತಿರುವ ಶ್ರೀ ವೀರಭದ್ರೇಶ್ವರ ಸಮುದಾಯ ಭವನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 8 ರಿಂದ 12 ರವರೆಗೆ ಲೋಕಕಲ್ಯಾಣಾರ್ಥವಾಗಿ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜೆ ನಡೆಯುವುದು.

ಸಮ್ಮುಖವನ್ನು ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ (ರಾಮಘಟ್ಟ) ಹಾಗೂ ಶ್ರೀ ವರ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ (ಹರಪನಹಳ್ಳಿ) ಇವರುಗಳು ವಹಿಸುವರು.

ಸಭಾ ಕಾರ್ಯಕ್ರಮದಲ್ಲಿ ಡಿ.ಆರ್. ಧನಂಜಯ ಸ್ವಾಗತಿಸುವರು. ಡಾ. ಬಿ.ಎಂ. ಜಯದೇವಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು. ಜಿ.ಎಂ. ಸಿದ್ದೇಶ್ವರ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮವನ್ನು ಬಿ.ಜಿ. ಅಜಯ್‌ಕುಮಾರ್ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಯಶವಂತರಾವ್ ಜಾಧವ್, ವೀರೇಂದ್ರ ಪಾಟೀಲ್, ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ್ ದಾಸಕರಿಯಪ್ಪ, ಹೆಚ್.ಎಸ್. ನಾಗರಾಜ್, ತೇಜಸ್ವಿ ಪಟೇಲ್, ಎಸ್.ಬಿ. ಅಜಯ್, ಜಿ.ಎಂ. ರುದ್ರಗೌಡ್ರು ಆಗಮಿಸುವರು.

## ಕರವೇ ರಾಜ್ಯಾಧ್ಯಕ್ಷ ಅವಿನಾಶ್ ಸೇರಿ ಮೂವರ ಮೇಲೆ ದೂರು

ದಾವಣಗೆರೆ, ಜು. 21- 50 ಸಾವಿರ ರೂ. ಹಣಕ್ಕೆ ಬೇಡಿಕೆ ಇಟ್ಟು, ದೂರು ನೀಡುವುದಾಗಿ ಬೆದರಿಸಿದ್ದಾರೆಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಅವಿನಾಶ್ ಸೇರಿದಂತೆ ಮೂವರ ಮೇಲೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ರಂಗನಾಥ ಬಡಾವಣೆಯ ಶ್ರೀಮತಿ ಲಕ್ಷ್ಮೀ ಅವರು ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಮನೆ ನಿರ್ಮಿಸಿಕೊಡಲು ಮೇಸ್ತ್ರಿ ವಿಜಯಕುಮಾರ್ ಅವರಿಗೆ ಗುತ್ತಿಗೆ ನೀಡಿದ್ದು, ಹೆಚ್ಚು ಹಣ ಪಡೆದಿದ್ದರೂ ಆವರು ಕೆಲಸ ಪೂರ್ಣಗೊಳಿಸಿರಲಿಲ್ಲ.

ಜುಲೈ 16ರಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಎಂದು ಹೇಳಿಕೊಂಡ ಅವಿನಾಶ್ ಎಂಬ ವ್ಯಕ್ತಿ ಕರೆ ಮಾಡಿ, ನಿಮ್ಮ ಬಿಲ್ಡಿಂಗ್‌ನಲ್ಲಿ ಕೆಲಸ ಮಾಡುವ ಯಾರೋ ಒಬ್ಬ ವ್ಯಕ್ತಿ ಬಿದ್ದಿದ್ದಾನೆ. ಅವನಿಗೆ ಪೆಟ್ಟು ಬಿದ್ದಿದೆ. ಅವನು ದಲಿತನಾಗಿದ್ದು, ನಿಮ್ಮ ಮೇಲೆ ಕೇಸ್ ಹಾಕಿಸುತ್ತಾನೆ. ನನಗೆ 50 ಸಾವಿರ ರೂ. ಕೊಟ್ಟರೆ ಸೆಟ್ಲ್ ಮೆಂಟ್ ಮಾಡಿಸುತ್ತೇನೆ ಎಂದು ಮೇಸ್ತ್ರಿ ವಿಜಯಕುಮಾರ್, ಶಿವಕುಮಾರ್ ಜೊತೆ ಸೇರಿ ಹಣಕ್ಕೆ ಬೇಡಿಕೆ ಇಟ್ಟಿದ್ದು, ನಾನು ಒಪ್ಪಿರಲಿಲ್ಲ. ಅದೇ ದಿನ ಅವರು ವಿದ್ಯಾನಗರ ಠಾಣೆಗೆ ಬಂದ ಕಟ್ಟಡದ ಮೇಲಿನಿಂದ ಬಿದ್ದಿದ್ದಾನೆಂದು ವ್ಯಕ್ತಿಯೊಬ್ಬನ ಮಗನ ಕೈಯಿಂದ ಸುಳ್ಳು ದೂರು ಕೊಡಿಸಿದ್ದಾರೆ ಎಂದು ಲಕ್ಷ್ಮಿ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

## ವಿವರ ಕೇಳಿದ ಸುಪ್ರೀಂ ಕೋರ್ಟ್

(1ನೇ ಪುಟದಿಂದ) ಸಲ್ಲಿಸಲಾಗಿತ್ತು. ಈ ವಿಷಯದ ಸ್ವರೂಪ ಪರಿಗಣಿಸಿದಾಗ, ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುವುದು ಉತ್ತಮ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಕೌಲ್ ಹೇಳಿದ್ದಾರೆ. ಶ್ರೀ ಕೃಷ್ಣ ಜನ್ಮಭೂಮಿಗೆ ಸೇರಿದ 15.37 ಎಕರೆ ಜಾಗದಲ್ಲಿ ಶಾಹಿ ಮಸ್ಜಿದ್ ಈದ್ಗಾ ನಿರ್ಮಿಸಲಾಗಿದೆ. ಇದನ್ನು ಸ್ಥಳಾಂತರಿಸಬೇಕು ಎಂದು ಹಿಂದೂ ಸೇನಾ ಮುಖ್ಯಸ್ಥ ವಿಷ್ಣು ಗುಪ್ತ ಹಾಗೂ ಇತರರು ಹಿರಿಯ ವಿಭಾಗೀಯ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು.

ಮೇ 26ರಂದು ಆದೇಶ ಹೊರಡಿಸಿದ್ದ ಹೈಕೋರ್ಟ್, ಈ ವಿಷಯವನ್ನು ಮಥುರಾ ನ್ಯಾಯಾಲಯದಿಂದ ತನಗೆ ವರ್ಗಾಯಿಸಬೇಕೆಂದು ತಿಳಿಸಿತ್ತು.

## ನಗರದಲ್ಲಿ ನಾಳೆ ಕಾಂಗ್ರೆಸ್ ನೂತನ ಸಚಿವರು, ಶಾಸಕರಿಗೆ ಸನ್ಮಾನ

ದಾವಣಗೆರೆ, ಜು. 21- ಜಿಲ್ಲಾ ಕಾಂಗ್ರೆಸ್ ಸಮಿತಿಯ ಎಲ್ಲ ಮುಂಚೂಣಿ ಘಟಕಗಳ ಒಕ್ಕೂಟದ ವತಿಯಿಂದ ನಾಡಿದ್ದು ದಿನಾಂಕ 23ರ ಭಾನುವಾರ ಬೆಳಗ್ಗೆ 11.30ಕ್ಕೆ ನಗರದ ಶ್ರೀ ಅಭಿನವ ರೇಣುಕಾ ಮಂದಿರದಲ್ಲಿ ನೂತನ ಸಚಿವರು ಹಾಗೂ ಶಾಸಕರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಎಸ್ಸಿ ವಿಭಾಗದ ಜಿಲ್ಲಾಧ್ಯಕ್ಷ ಬಿ.ಎಚ್. ವೀರಭದ್ರಪ್ಪ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವರಾದ ಎಸ್. ಎಸ್. ಮಲ್ಲಿಕಾರ್ಜುನ್, ಕೆ.ಎಚ್. ಮುನಿಯಪ್ಪ, ಎಚ್. ಸಿ. ಮಹಾದೇವಪ್ಪ, ಜಮೀರ್ ಅಹ್ಮದ್ ಖಾನ್, ಮಾಜಿ ಸಚಿವ ಎಚ್. ಆಂಜನೇಯ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸೈಯದ್ ಸೈಫುಲ್ಲಾ, ಶಾಸಕರಾದ ಡಿ.ಜಿ. ಶಾಂತನಗೌಡ, ಬಿ. ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಶಿವಗಂಗಾ ಬಸವರಾಜು, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಮಾಜಿ ಶಾಸಕ ಎಸ್. ರಾಮಪ್ಪ, ಪರಾಜಿತ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ತಂಜೀಮುಲ್ ಮುಸ್ಲಿಮೀನ್ ಕಮಿಟಿ ಅಧ್ಯಕ್ಷ ದಾದಾಪೀರ್ ಶೇಟ್, ಮಾಜಿ ಅಧ್ಯಕ್ಷ ಸಾಧಿಕ್ ಪೈಲ್ವಾನ್, ಮುಖಂಡರಾದ ಕೆ. ಪುಟ್ಟಸ್ವಾಮಿ ಗೌಡ್ರು, ಎಂ. ರಾಮಚಂದ್ರಪ್ಪ, ಡಿ. ಲಕ್ಷ್ಮಿ ವೆಂಕಟೇಶ್, ಧರ್ಮಸೇನಾ, ದಿನೇಶ್ ಕೆ. ಶೆಟ್ಟಿ, ಜಿ.ಎಸ್. ಮಂಜುನಾಥ್, ಎನ್. ರುದ್ರಮುನಿ, ಎಚ್.ಜೆ. ಮೈನುದ್ದೀನ್, ಅಯ್ಯೂಬ್ ಪೈಲ್ವಾನ್, ಗೌಡ್ರ ಚನ್ನಪ್ಪ, ಡಾ. ಎಚ್. ವಿಶ್ವನಾಥ್, ಬಿ. ವೀರಣ್ಣ, ಡಿ. ಬಸವರಾಜ್, ಟಿ.ಎಸ್. ರಾಮಯ್ಯ, ಎನ್.ಜಿ. ಪುಟ್ಟಸ್ವಾಮಿ, ಜಯದೇವ ನಾಯ್ಕ, ದೋಣಿ ನಿಂಗಪ್ಪ, ರಾಘವೇಂದ್ರ ನಾಯ್ಕ, ಕೆ.ಜಿ. ಶಿವಕುಮಾರ್ ಸೇರಿದಂತೆ ಎಲ್ಲಾ ಮುಂಚೂಣಿ ಘಟಕಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಅನಿತಾ ಬಾಯಿ ಮಾಲತೇಶ್, ಸುಭಾನ್‌ಸಾಬ್, ಎಸ್. ನಂಜಾ ನಾಯ್ಕ, ಡೋಲಿ ಚಂದ್ರು, ಕೆ.ಎಂ. ಮಂಜುನಾಥ್, ಗುರುಮೂರ್ತಿ, ಎಂ.ಕೆ. ಲಿಯಾಖತ್ ಅಲಿ, ರಾಕೇಶ್ ಮತ್ತಿತರರಿದ್ದರು.

## ಪ್ರಧಾನಿ ಮೋದಿಯಿಂದ 118 ಲಕ್ಷ ಕೋಟಿ ಸಾಲ

(1ನೇ ಪುಟದಿಂದ) ಮಟ್ಟಕ್ಕೆ ಏರಿಸಿದರೆ, ಹಾಲು-ಮೊಸರು-ಮಜ್ಜಿಗೆ- ಮಂಡಕ್ಕಿ ಮೇಲೂ ಜಿಎಸ್‌ಟಿ ಹಾಕಿದರೆ ಬಡವರು, ಮಧ್ಯಮ ವರ್ಗದವರ ಗತಿ ಏನು? ಎಂದು ಪ್ರಶ್ನಿಸಿದರು. ಬಸವಣ್ಣನವರ ದಾಸೋಹ ಮತ್ತು ಕಾಯಕ ಸಂಸ್ಕೃತಿಯ ಆಶಯ ನಮ್ಮ ಆಯವ್ಯಯದಲ್ಲಿದೆ. ಬಿಜೆಪಿಯವರು ಬಸವ ವಿರೋಧಿಗಳು ಎಂದರು. ಬೆಂಕಿ ಹಚ್ಚುವುದೇ ಬಿಜೆಪಿ ಕೆಲಸ. ಅವರು ಮಣಿಪುರವನ್ನೂ ಬಿಡಲ್ಲ, ಕರ್ನಾಟಕವನ್ನೂ ಬಿಡಲ್ಲ. ಬೆಂಕಿ ಹಚ್ಚುತ್ತಾರೆ ಎಂದರು.

## ನಗರದಲ್ಲಿ ಇಂದು ಉಚಿತ ದಂತ ತಪಾಸಣಾ ಶಿಬಿರ



ಭಾವಸಾರ ವಿಜನ್ ಇಂಡಿಯಾ ಹಾಗೂ ಚಿಗಟೇರಿ ಜಿಲ್ಲಾ ಆಸ್ಪತ್ರೆ ಇವರ ಸಹಯೋಗದೊಂದಿಗೆ ಇಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 2 ರವರೆಗೆ ನಗರದ ಶ್ರೀ ವಿಠ್ಠಲ ರುಕುಮಾಯಿ ಮಂದಿರ ಮಹಾರಾಜಪೇಟೆಯಲ್ಲಿ ಉಚಿತ ದಂತ ತಪಾಸಣಾ ಶಿಬಿರ ನಡೆಯಲಿದೆ ಎಂದು ಅಶೋಕ್ ನವಲೆ (98443 59739), ಶ್ರೀಮತಿ ಸರಳಾ ಅಮಟೆ (94483 64830) ತಿಳಿಸಿದ್ದಾರೆ.

## ಓದುಗರ ಪತ್ರ

### ಐ.ಎ.ಎಸ್ ಅಧಿಕಾರಿಗಳ ದುರ್ಬಳಕೆ ಖಂಡಿಸಿ ಕೇಂದ್ರಕ್ಕೆ ಪತ್ರ

**ಮಾನ್ಯರೇ,**

ಕಾಂಗ್ರೆಸ್ ಪಕ್ಷವು ಇತ್ತೀಚೆಗೆ ಬೆಂಗಳೂರಿನಲ್ಲಿ ವಿರೋಧ ಪಕ್ಷಗಳ ಸಭೆಗೆ ಆಗಮಿಸಿದ್ದ ಗಣ್ಯರ ಆತಿಥ್ಯಕ್ಕೆ ಐ.ಎ.ಎಸ್. ಅಧಿಕಾರಿಗಳನ್ನು ನೇಮಿಸಿ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಹುರುಪಿನಲ್ಲಿರುವ ಹೊಸ ಸರ್ಕಾರದ ಇತ್ತೀಚಿನ ಅಪಸವ್ಯಗಳಲ್ಲೊಂದು. ಈ ಸಂಬಂಧ ಕಾಂಗ್ರೆಸ್ ವಿರೋಧ ಪಕ್ಷಗಳು ಮಾಡಿದ ಗದ್ದಲ, ಪ್ರತಿಭಟನೆ, ಅಮಾನತ್ತು ಮತ್ತು ಧರಣಿಗಳಿಂದಾಗಿ ವಿಧಾನಸಭಾ ಅಧಿವೇಶನವು ರಣರಂಗವಾಗಿ ಮಾರ್ಪಾಡುಗೊಂಡಿದ್ದು ನಾಚಿಗೆಗೇಡಿನ ಸಂಗತಿ. ಇದು ತೆರಿಗೆದಾರರ ಅಪಾರ ಹಣ ಮತ್ತು ಸದನದ ಅಮೂಲ್ಯ ಸಮಯದ ದುರುಪಯೋಗದಲ್ಲಿ ನಮ್ಮ ಶಾಸಕರು ತೊಡಗಿರುವುದರ ಮತ್ತೊಂದು ನಿದರ್ಶನವಾಗಿದೆ.

ಹಿಂದೆಯೂ ಈ ರೀತಿ ಮಾಡಲಾಗಿತ್ತು ಎಂಬ ಸಮಜಾಯಿಷಿಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಕೊಟ್ಟಿರುವುದು ಅಸಮರ್ಥನೀಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಐ.ಎ.ಎಸ್. ಅಧಿಕಾರಿಗಳು ಇರುವುದು ಜನತೆಗೆ ದಕ್ಷ, ಸ್ವಚ್ಛ ಆಡಳಿತ ನೀಡುವುದಕ್ಕೆ ಹೊರತು ರಾಜಕಾರಣಿಗಳ ಸೇವೆ ಮಾಡುವುದಕ್ಕಲ್ಲ. ಈ ರೀತಿ ಮಾಡುವುದು ಐ.ಎ.ಎಸ್. ನೀತಿ, ನಿಯಮಗಳ 5(1) ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ನಿವೃತ್ತ ಐ.ಎ.ಎಸ್. ಅಧಿಕಾರಿ ಎಂ. ಮದನಗೋಪಾಲ್ ತೀವ್ರವಾಗಿ ಆಕ್ಷೇಪಿಸಿದ್ದಾರೆ. ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿದ್ದವರೂ, ಅತ್ಯಂತ ದಕ್ಷ ಐ.ಎ.ಎಸ್. ಅಧಿಕಾರಿಗಳಲ್ಲೊಬ್ಬರೂ ಆಗಿರುವ ಅವರು ಈ ಕುರಿತು ಸೂಕ್ತ ವಿಚಾರಣೆ ಕೋರಿ ಕೇಂದ್ರದ ಸಂಪುಟ ಕಾರ್ಯದರ್ಶಿ ಮತ್ತು ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿರುವುದಾಗಿ ವರದಿಯಾಗಿದೆ.

ಐ.ಎ.ಎಸ್. ಅಧಿಕಾರಿಗಳ ಆತ್ಮ ಗೌರವವನ್ನು ಎತ್ತಿ ಹಿಡಿಯುವ ಮದನಗೋಪಾಲ್ ಅವರ ಈ ಕ್ರಮ ಅತ್ಯಂತ ಸ್ವಾಗತಾರ್ಹ. ಅವರ ಅಧಿಕೃತ ಕರ್ತವ್ಯಕ್ಕೆ ಸಂಬಂಧಿಸಿದ ಹಾಗೂ ಶುದ್ಧ ರಾಜಕೀಯವಾದ ಕಾರ್ಯಕ್ರಮ ರಾಜ್ಯದ ಗೌರವಾನ್ವಿತ ಐ.ಎ.ಎಸ್. ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡಿರುವ ಸರ್ಕಾರದ ಈ ಕ್ರಮವು ಅತ್ಯಂತ ಖಂಡನೀಯ.

**-ಎಸ್.ಬಿ. ರಂಗನಾಥ್**, ದಾವಣಗೆರೆ., ಮೊ : 94800 93958

## ಉಜ್ಜಿನಪ್ಪ ನಿಧನಕ್ಕೆ ಪಂಡಿತಾರಾಧ್ಯ ಶ್ರೀಗಳ ಸಂತಾಪ

ಸಾಣೇಹಳ್ಳಿ, ಜು. 21- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎ. ಆರ್. ಉಜ್ಜನಪ್ಪನವರ ನಿಧನಕ್ಕೆ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಜನಪರ ಸೇವಾ ಕಾರ್ಯಗಳಲ್ಲಿ ಸದಾ ಮುಂದಿರುತ್ತಿದ್ದ ಉಜ್ಜನಪ್ಪನವರಿಗೆ ಸಾಣೇಹಳ್ಳಿಯ ರಂಗಚಟುವಟಿಕೆಗಳ ಬಗ್ಗೆ ವಿಶೇಷ ಒಲವಿತ್ತು. 'ಮತ್ತೆ ಕಲ್ಯಾಣ' ಅಭಿಯಾನ ದಾವಣಗೆರೆಯಲ್ಲಿ ನಡೆದಾಗ ಲವಲವಿಕೆಯಿಂದ ಓಡಾಡಿ ಅದರ ಯಶಸ್ಸಿಗೆ ಕಾರಣರಾದವರಲ್ಲಿ ಅವರೂ ಒಬ್ಬರು ಎಂದು ಶ್ರೀಗಳು ಸ್ಮರಿಸಿದ್ದಾರೆ.

ಅವರ ಅನಿರೀಕ್ಷಿತ ಮರಣ ವಾರ್ತೆಯನ್ನು ಕೇಳಿ ತುಂಬಾ ವೇದನೆಯಾಯ್ತು. ಅವರ ಅಗಲುವಿಕೆಯಿಂದ ಆಗಿರುವ ದುಃಖವನ್ನು ಸಹಿಸುವ ಶಕ್ತಿಯನ್ನು ಬಸವಾದಿ ಶರಣರಲ್ಲಿ ಅವರ ಮನೆತನದ ಸದಸ್ಯರುಗಳಿಗೆ, ಬಂಧು ಬಳಗಕ್ಕೆ, ಮಿತ್ರರಿಗೆ ಕರುಣಿಸಲಿ ಎಂದು ಸ್ವಾಮೀಜಿ ಪ್ರಾರ್ಥಿಸಿದ್ದಾರೆ.

## ಉಜ್ಜನಪ್ಪ ನಿಧನಕ್ಕೆ ಜಿಲ್ಲಾಧಿಕಾರಿ ಜಾನಕಿ ಶೋಕ

ದಾವಣಗೆರೆ,ಜು.21- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ ಅವರ ನಿಧನಕ್ಕೆ ಬಾಗಲಕೋಟೆ ಜಿಲ್ಲಾಧಿಕಾರಿ ಶ್ರೀಮತಿ ಕೆ.ಎಂ. ಜಾನಕಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ತಾವು ದಾವಣಗೆರೆ ಉಪ ವಿಭಾಗಾಧಿಕಾರಿಯಾಗಿದ್ದ ಸಂದರ್ಭದಲ್ಲಿ ತಮ್ಮ ಕಚೇರಿಯ ವ್ಯವಸ್ಥಾಪಕರಾಗಿದ್ದ ಉಜ್ಜನಪ್ಪ ಅವರ ಸೇವೆಯನ್ನು ಮೆಲಕು ಹಾಕಿರುವ ಜಾನಕಿ, ಉಜ್ಜನಪ್ಪ ಸಂಘಟನೆಗೆ ಮತ್ತೊಂದು ಹೆಸರಿನಂತಿದ್ದರು ಎಂದು ಶ್ಲಾಘಿಸಿದ್ದಾರೆ.

## ಉಜ್ಜನಪ್ಪ ನಿಧನಕ್ಕೆ ಪ್ರೊ|| ಎಸ್.ಬಿ. ರಂಗನಾಥ್ ಸಂತಾಪ

ದಾವಣಗೆರೆ, ಜು. 21- ಎ.ಆರ್. ಉಜ್ಜನಪ್ಪನವರ ಹಠಾತ್ ನಿಧನದಿಂದ ತೀವ್ರ ಆಘಾತ ಉಂಟಾಗಿದೆ ಎಂದು ಅವಿಭಜಿತ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಪ್ರೊ. ಎಸ್.ಬಿ. ರಂಗನಾಥ್ ಹೇಳಿದ್ದಾರೆ. ಅವರೊಬ್ಬ ಸರಳ,ಸಜ್ಜನ, ಸ್ನೇಹ ಜೀವಿಯಾಗಿದ್ದರೆಂಬುದನ್ನು ಕಳೆದ ಮೂವತ್ತು ವರ್ಷಗಳ ಅವರ ಜೊತೆಗಿನ ಆಪ್ತ ಒಡನಾಟದಿಂದ ಕಂಡುಕೊಂಡಿದ್ದೇನೆ ಎಂದು ಅವರು ತಮ್ಮ ಸಂತಾಪ ಸೂಚಕ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ನಾಟಕ ಪ್ರದರ್ಶನ

ದಾವಣಗೆರೆ,ಜು.21- ಶ್ರೀ ಓಂಕಾರೇಶ್ವರ ನಾಟಕ ಸಂಘದಿಂದ ನಾಡಿದ್ದು ದಿನಾಂಕ 23ರ ಭಾನುವಾರ ಸಂಜೆ 6 ಗಂಟೆಗೆ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ದಿ. ಕಣ್ವಿ ವಿರಚಿತ 'ಹಳ್ಳಿ ಹುಡುಗಿ ಮೊಸರು ಗಡಿಗಿ' ಕೌಟುಂಬಿಕ ಹಾಸ್ಯ ನಾಟಕ ಪ್ರದರ್ಶನಗೊಳ್ಳಲಿದೆ.

ರಂಗಭೂಮಿ ಕಲಾವಿದೆ ದಿ. ವಿ. ಮಂಜುಳಾ ಅವರ ಸವಿನೆನಪಿಗಾಗಿ, ಅವರ ತಾಯಿ - ಕಲಾವಿದೆ ಬಿ.ಓ. ವಿಜಯಲಕ್ಷ್ಮಿ ಅವರ ಸಹಾಯಾರ್ಥ ಏರ್ಪಡಿಸಿರುವ ಈ ನಾಟಕದಲ್ಲಿ ಕಾಮಿಡಿ ಕಿಲಾಡಿಗಳು ಸೀಸನ್-4 ವಿನ್ನರ್ ಹರೀಶ್ ಹಿರಿಯೂರು ಅವರು ಹಾಸ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 96869-60489.

## ನಗರದಲ್ಲಿಂದು ಸಂಕಲ್ಪ ದಿನಾಚರಣೆ ಇಂದು

ವಿದ್ಯಾಸಾಗರ ಶಾಲೆಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಸಂಕಲ್ಪ ದಿನಾಚರಣೆ ನಡೆಯಲಿದೆ. ಹರಿಹರದ ಶ್ರೀ ವಿವೇಕಾನಂದ ರಾಮಕೃಷ್ಣಾಶ್ರಮದ ಶಾರದೇಶಾನಂದ ಸ್ವಾಮೀಜಿ ಮತ್ತು ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ ಅವರು ಮಕ್ಕಳಿಗೆ ಸಂಕಲ್ಪ ಬೋಧಿಸಿ, ಪ್ರಮಾಣ ವಚನ ನೆರವೇರಿಸಲಿದ್ದಾರೆ.

## ತತ್ತರಿಸಿರುವ ಗ್ಯಾರಂಟಿ

(1ನೇ ಪುಟದಿಂದ) ಯೋಜನೆಗಳ ಅನುಷ್ಠಾನಕ್ಕೆ ಪ್ರಸಕ್ತ ವರ್ಷ 35410 ಕೋಟಿ ರೂ. ಅಗತ್ಯವಿದೆ ಎಂದರು. ತೆರಿಗೆ ಹಣದ ಜೊತೆಗೆ ಜೊತೆಗೆ 8068 ಕೋಟಿ ರೂ. ಹೆಚ್ಚುವರಿ ಸಾಲ, ಬಂಡವಾಳ ಯೋಜನೆಗಳ ಮರು ಆದ್ಯತೆ ನಿಗದಿ ಮೂಲಕ 6086 ಕೋಟಿ ರೂ. ಹಾಗೂ ರಾಜಸ್ವ ಯೋಜನೆಗಳ ಮರು ಆದ್ಯತೆ ನಿಗದಿ ಪಡಿಸುವ ಮೂಲಕ 7000 ಕೋಟಿ ರೂ. ಸೇರಿದಂತೆ ಒಟ್ಟು 34,654 ಕೋಟಿ ರೂ. ಸಂಪನ್ಮೂಲ ಕ್ರೋಢೀಕರಣ ಮಾಡಲಾಗುವುದು ಎಂದು ತಿಳಿಸಿದರು.

## ನಗರದಲ್ಲಿ ಇಂದು ಬಿಜೆಪಿ ಪ್ರತಿಭಟನೆ

ರಾಜ್ಯ ಸರ್ಕಾರದ ದ್ವಿಮುಖ ನೀತಿ ಹಾಗೂ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳನ್ನು ಪಕ್ಷದ ಕಾರ್ಯಕ್ರಮಕ್ಕೆ ಉಪಯೋಗಿಸಿಕೊಂಡಿರುವುದರ ವಿರುದ್ಧ ಪ್ರತಿಭಟನೆ ಮಾಡಿದ ಸಂದರ್ಭದಲ್ಲಿ ಬಿಜೆಪಿ ಶಾಸಕರನ್ನು ವಿಧಾನಸಭಾ ಕಲಾಪದಲ್ಲಿ ಅಮಾನತ್ತು ಗೊಳಿಸಿದ್ದನ್ನು ವಿರೋಧಿಸಿ, ಜಿಲ್ಲಾ ಬಿಜೆಪಿ ಕಛೇರಿಯಿಂದ ಪ್ರತಿಭಟನಾ ಮೆರವಣಿಗೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ತಿಳಿಸಿದ್ದಾರೆ.

## ಹಾಲಿನ ದರ 3 ರೂ. ಹೆಚ್ಚಿಸಲು ನಿರ್ಧಾರ

(1ನೇ ಪುಟದಿಂದ) ಬೇಡಿಕೆ ಸಲ್ಲಿಸಿದ್ದೆವು. ಅದಕ್ಕೆ ಮುಖ್ಯಮಂತ್ರಿ ಒಪ್ಪಿಕೊಡಲಿಲ್ಲ ಎಂದರು.

ಹೆಚ್ಚಳವಾದ 3 ರೂ.ಗಳು ರೈತರಿಗೆ ತಲುಪಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಸಭೆಯಲ್ಲಿ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಸಹಕಾರ ಸಚಿವ ಕೆ.ಎನ್. ರಾಜಣ್ಣ, ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

## 24 ರಂದು ಆಧುನಿಕ ಹೈನುಗಾರಿಕೆ ತರಬೇತಿ

ದಾವಣಗೆರೆ, ಜು. 21 - ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 24, 25 ರಂದು ಆಧುನಿಕ ಹೈನುಗಾರಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಹೊನ್ನಾಳಿ ಪಟ್ಟಣ, ಹನುಮಸಾಗರ ಗ್ರಾ. ಪಂ. ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕಿನಲ್ಲಿ ಇಂದು ಬೆಸ್ಕಾಂ ವತಿಯಿಂದ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಹೊನ್ನಾಳಿ ಪಟ್ಟಣ ಮತ್ತು ಹನುಮಸಾಗರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಯಪ್ಪ ತಿಳಿಸಿದ್ದಾರೆ.



## ಹೆಚ್ಚಾದ ತುಂಗಭದ್ರೆ, ಸುರಕ್ಷಿತ ಸ್ಥಳಕ್ಕೆ ತೆರಳಲು ಸೂಚನೆ

ಹರಿಹರ, ಜು. 21 - ಮಳೆಯ ಅಬ್ಬರದಿಂದಾಗಿ ತುಂಗಭದ್ರಾ ನದಿಯ ನೀರಿನ ರಭಸವು ಹೆಚ್ಚಾಗಿದೆ. ನದಿಯ ಹರಿವು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ನದಿ ಪಾತ್ರದ ಪಕ್ಕದಲ್ಲಿ ವಾಸಿಸುವ ಸಾರ್ವಜನಿಕರು ಸುರಕ್ಷಿತ ಸ್ಥಳಕ್ಕೆ ತೆರಳಲು ತಾಲ್ಲೂಕು ಆಡಳಿತ ಸೂಚನೆ ನೀಡಿದೆ.

# ಮಣಿಪುರ : ನೆರವು ಕಾರ್ಯಾಚರಣೆಗೆ ಮಹಿಳಾ ಬೆಟಾಲಿಯನ್‌ಗಳ ಅಡ್ಡಿ

**ಗಂಭೀರ ಕೃತ್ಯ ಎಸಗಲು ಮೀರಾ ಪೈಬಿ ಮಹಿಳಾ ಸಂಘಟನೆಗಳ ಸಹಕಾರ ಎಂದ ಸೈನಿಕ ಅಧಿಕಾರಿಗಳು**

ಇಂಫಾಲ್, ಜು. 21 - ಮಣಿಪುರದಲ್ಲಿ 'ಮೀರಾ ಪೈಬಿಸ್' (ಪಂಜು ಹಿಡಿದ ಮಹಿಳೆಯರು) ಮಹಿಳೆಯರು ಅರೆ ಸೇನಾ ಪಡೆಗಳ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುತ್ತಿರುವುದಲ್ಲದೇ, ಗಂಭೀರ ಕೃತ್ಯಗಳನ್ನು ಎಸಗಲು ನೆರವಾಗುತ್ತಿದ್ದಾರೆ. ಇವರ ನಿಯಂತ್ರಣಕ್ಕಾಗಿ ಹೆಚ್ಚಿನ ಮಹಿಳಾ ಬೆಟಾಲಿಯನ್‌ಗಳ ಅಗತ್ಯವಿದೆ ಎಂದು ರಕ್ಷಣಾ ಅಧಿಕಾರಿಗಳು ಹೇಳಿದ್ದಾರೆ.

ಪ್ರಸಕ್ತ ಅಸ್ಸಾಂ ರೈಫಲ್‌ನಲ್ಲಿ ಕೆಲವೇ ಮಹಿಳೆಯರಿದ್ದಾರೆ. ಇವರೂ ಸಹ ಕಾನೂನು ವ್ಯವಸ್ಥೆ ನಿರ್ವಹಿಸುವ ತರಬೇತಿ ಪಡೆದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಅರೆ ಸೇನಾ ಪಡೆಗಳು, ಅದರಲ್ಲೂ ಕ್ಷಿಪ್ರ ಕಾರ್ಯಾಚರಣೆ ಪಡೆಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿಸುವ ಅಗತ್ಯವಿದೆ. ಕ್ಷಿಪ್ರ ಕಾರ್ಯಾಚರಣೆ ಪಡೆಗಳು ಗಲಭೆ ನಿಯಂತ್ರಿಸಲು ಸಂಪೂರ್ಣ ಸನ್ನದ್ಧವಾಗಿರುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಮ್ಮನ್ನು ತಾವು ಮೈರಾ ಪೈಬಿ ಎಂದು ಹೇಳುವ ಮಹಿಳೆಯರು ಕಾರ್ಯಾಚರಣೆಗೆ ಅಡ್ಡಿಪಡಿಸುತ್ತಾರೆ. ಕಾರ್ಯಾಚರಣೆಗೆ ಮುಂದಾದರೆ ವಿವಸ್ತ್ರಗೊಳ್ಳುವುದಾಗಿ ಬೆದರಿಸುತ್ತಾರೆ. ಸೈನಿಕ ಪಡೆಗಳು ಸ್ಥಳಕ್ಕೆ ತೆರಳಿದಾಗ ಬಡಿಗೆ ಹಿಡಿದು ರಸ್ತೆ ತಡೆಯುತ್ತಾರೆ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಅಧಿಕಾರಿ ಹೇಳಿದ್ದಾರೆ.

ಮಣಿಪುರದಲ್ಲಿ ಎರಡು ಸಮುದಾಯಗಳ ನಡುವೆ ಸಂಘರ್ಷ ನಡೆಯುವುದನ್ನು ತಡೆಯಲು ಸೈನ್ಯ ಇಲ್ಲವೇ ಅಸ್ಸಾಂ ರೈಫಲ್‌ಗಳು ಸ್ಥಳಕ್ಕೆ ತಲುಪಿ ರುತ್ತವೆ. ಆದರೆ, ಸ್ವಯಂ ಸೇವಕರು ಎನಿಸಿಕೊಂಡ ವರು ಭದ್ರತಾ ಸಿಬ್ಬಂದಿಗೆ ಅಡ್ಡಿ ಪಡಿಸುತ್ತಾರೆ.

20ಕ್ಕೂ ಹೆಚ್ಚು ಮಹಿಳೆಯರು ಬಡಿಗೆ ಹಿಡಿದು ಪ್ರಮುಖ ಸ್ಥಳಗಳಲ್ಲಿ ಅಡ್ಡಗಟ್ಟುತ್ತಾರೆ. ಅಧಿಕಾರಿಗಳು ಹಾಗೂ ಸೈನಿಕರು ಗುರುತಿನ ಚೀಟಿ ತೋರಿಸಬೇಕೆಂದು ಪಟ್ಟು ಹಿಡಿಯುತ್ತಾರೆ. ಇದರಿಂದಾಗಿ ದುರ್ಗಮ ಸ್ಥಳಗಳಲ್ಲಿರುವ ಬುಡಕಟ್ಟು ಜನರಿಗೆ ನೆರವು ತಲುಪಿಸಲು ಆಗುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ಮೈರಾ ಪೈಬಿ ಗುಂಪಿನವರು ಪತ್ರಕರ್ತರನ್ನೂ ಬಿಡುವುದಿಲ್ಲ. ಅವರನ್ನೂ ಸಹ ಪ್ರಶ್ನಿಸುತ್ತಾರೆ. ಈ ಮಹಿಳೆಯರು ಸೈನಿಕ ಸಿಬ್ಬಂದಿ ಜೊತೆ ವಾಗ್ವಾದ ನಡೆಸಿದಾಗ ಪೊಲೀಸರು ಮೂಕ ಪ್ರೇಕ್ಷಕರಾಗಿರುತ್ತಾರೆ.

ಮಣಿಪುರದಲ್ಲಿ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಟ ನಡೆಸಲು ಪಂಜು ಹಿಡಿದ ಮಹಿಳೆಯರನ್ನು ಮೈರಾ ಪೈಬಿ ಎಂದು ಕರೆಯಲಾಗುತ್ತಿತ್ತು. ಇವರು ಸ್ವಾತಂತ್ರ್ಯ ಪೂರ್ವದ ಕಾಲದಿಂದಲೂ ಹೋರಾಟಗಳಲ್ಲಿ ಭಾಗಿಯಾಗುತ್ತಾ ಬಂದಿದ್ದಾರೆ. ಸ್ವಾತಂತ್ರ್ಯಕ್ಕೆ ಮೊದಲು ಹಿರಿಯ ಮಹಿಳೆಯರಷ್ಟೇ ಈ ಹೋರಾಟದಲ್ಲಿ ಭಾಗಿಯಾಗುತ್ತಿದ್ದರು. ನಂತರ ಎಲ್ಲ ವಯೋಮಾನದವರು ಈ ಗುಂಪಿಗೆ ಸೇರಿದ್ದಾರೆ.

# ಪೋಕ್ಸೋ ಪ್ರಕರಣ : ಮಾಹಿತಿ ಮುಚ್ಚಿಟ್ಟವರಿಗೂ ಶಿಕ್ಷೆ



**ಪೋಕ್ಸೋ ಕಾನೂನು ಅರಿವು, ಮಕ್ಕಳ ಹಕ್ಕು ಕುರಿತ ಕಾರ್ಯಾಗಾರದಲ್ಲಿ ನ್ಯಾ|| ರಾಜೇಶ್ವರಿ ಎನ್. ಹೆಗಡೆ**

ದಾವಣಗೆರೆ, ಜು. 19 - ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಬಗ್ಗೆ ತಿಳಿದಿದ್ದರೂ ಪೊಲೀಸರಿಗೆ ಮಾಹಿತಿ ಕೊಡದಿದ್ದರೆ ಜೈಲು ಶಿಕ್ಷೆಯಾಗುತ್ತದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಎನ್.ಹೆಗಡೆ ಎಚ್ಚರಿಸಿದ್ದಾರೆ.

ನಗರದ ಲಯನ್ಸ್ ಭವನದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ಪೋಕ್ಸೋ ಕಾನೂನು ಅರಿವು ಹಾಗೂ ಮಕ್ಕಳ ಹಕ್ಕು ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಮಂಡ್ಯದಲ್ಲಿ ನ್ಯಾಯಮೂರ್ತಿ ಯಾಗಿದ್ದ ವೇಳೆ ಶಿಕ್ಷಕನೋರ್ವ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಇತರೆ ಶಿಕ್ಷಕರು ಈ ಬಗ್ಗೆ ತಿಳಿದೂ ಮೌನವಾಗಿದ್ದರು. ಪ್ರಕರಣ ಬೆಳಕಿಗೆ ಬಂದ ನಂತರ ದೌರ್ಜನ್ಯ ಎಸಗಿದ ಶಿಕ್ಷಕನಿಗಷ್ಟೇ ಅಲ್ಲದೇ, ಪ್ರಕರಣದ ಬಗ್ಗೆ ಮೌನವಾಗಿದ್ದ ಶಿಕ್ಷಕನಿಗೂ ಜೈಲು ಶಿಕ್ಷೆ ವಿಧಿಸಿದ್ದಾಗಿ ಹೇಳಿದರು.

ಮಕ್ಕಳ ಕಾಪಾಡುವುದು ಸಾರ್ವಜನಿಕ ಜವಾಬ್ದಾರಿಯಾಗಿದೆ. ಹೀಗಾಗಿ ಪೋಕ್ಸೋ ಕಾಯ್ದೆಯ ಸೆಕ್ಷನ್ 19 ಹಾಗೂ 20 ರ ಅನ್ವಯ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮುಚ್ಚಿಡುವವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ಇದೆ ಎಂದವರು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಾಯಕ ಕಾರ್ಯದರ್ಶಿಯೂ ಆಗಿರುವ ನ್ಯಾಯಮೂರ್ತಿ ಮಹಾವೀರ ಕರೆಣ್ಣವರ್, ಮಕ್ಕಳ ಮೇಲೆ ದೌರ್ಜನ್ಯ ಎಸಗಿದವರಿಗೆ ನ್ಯಾಯಾಲಯದಲ್ಲಿ ಜಾಮೀನು ದೊರೆಯುವುದಿಲ್ಲ. ದುಷ್ಕೃತ್ಯಕ್ಕೆ ನೇರವಾಗಿ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದವರಿಗೂ ಈ ಕಾಯ್ದೆಯಡಿ ಶಿಕ್ಷೆ ಇದೆ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ವಿಶ್ವ ಸಂಸ್ಥೆ ಮುಂದಿಟ್ಟ ಮಕ್ಕಳ ಹಕ್ಕುಗಳ ಒಡಂಬಡಿಕೆ ಅನ್ವಯ 1992ರಲ್ಲಿ ಭಾರತ ಮಕ್ಕಳ ಹಕ್ಕುಗಳನ್ನು ರೂಪಿಸಿದೆ. ಅದರ ಅನ್ವಯ ಮಕ್ಕಳಿಗೆ ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು ಹಾಗೂ ಭಾಗವಹಿಸುವ ಹಕ್ಕುಗಳು ಪ್ರಮುಖವಾಗಿ ದೊರೆತಿವೆ ಎಂದರು.

ಮಕ್ಕಳ ಹಕ್ಕುಗಳ ಸಲುವಾಗಿ ಸರ್ಕಾರವು ಮಕ್ಕಳ ನ್ಯಾಯ, ಬಾಲ್ಯ ವಿವಾಹ ನಿಷೇಧ, ಪೋಕ್ಸೋ, ಉಚಿತ ಶಿಕ್ಷಣ ಹಾಗೂ ಬಾಲ ಕಾರ್ಮಿಕ ನಿಷೇಧ ಕಾಯ್ದೆಗಳನ್ನು ಜಾರಿಗೆ ತಂದಿದೆ ಎಂದು ವಿವರಿಸಿದರು.

ವಕೀಲರ ಸಂಘದ ಕಾರ್ಯದರ್ಶಿ ಎಸ್. ಬಸವರಾಜ್ ಉಪನ್ಯಾಸ ನೀಡಿದರು. ಡಿ.ಡಿ.ಪಿ.ಐ. ಜಿ.ಆರ್. ತಿಪ್ಪೇಶಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆ ಮೇಲೆ ದಾವಣಗೆರೆ ಉತ್ತರ ವಲಯದ ಬಿಇಒ ಅಂಬಣ್ಣ, ಲಯನ್ಸ್ ಶಾಲೆಯ ಪ್ರಾಂಶುಪಾಲ ಶಾಂತವೀರಪ್ಪ, ಆರ್.ವಿ.ಜಿ.ಕೆ. ಕಾಲೇಜು ಪ್ರಾಂಶುಪಾಲ ನಿರಂಜನ್, ನಂದಗೋಕುಲ ಶಾಲೆಯ ಪ್ರಾಂಶುಪಾಲರಾದ ರೆಹನಾ ಬಾನು, ಇಸಿಓ ಡಿ. ನಾಗರಾಜ್ ಹಾಗೂ ಬಿಆರ್‌ಪಿ ರವಿಕುಮಾರ್ ಉಪಸ್ಥಿತರಿದ್ದರು.

## ನಟ ವಿವೇಕ್ ಒಬೆರಾಯ್‌ಗೆ 1.55 ಕೋಟಿ ರೂ. ವಂಚನೆ

ಮುಂಬೈ, ಜು. 21 - ಬಾಲಿವುಡ್ ನಟ ವಿವೇಕ್ ಓಬೆರಾಯ್‌ಗೆ ಮೂವರು 1.55 ಕೋಟಿ ರೂ.ಗಳ ವಂಚನೆ ಮಾಡಿದ್ದಾರೆ. ಚಿತ್ರ ನಿರ್ಮಾಣದಲ್ಲಿ ಹೂಡಿಕೆ ಮಾಡುವ ಸೋಗಿನಲ್ಲಿ ವಂಚನೆ ನಡೆದಿದೆ ಎಂದು ಪೊಲೀಸರಲ್ಲಿ ದೂರು ದಾಖಲಿಸಲಾಗಿದೆ. ಚಿತ್ರ ನಿರ್ಮಾಪಕರೊಬ್ಬರೂ ಸೇರಿದಂತೆ ಮೂವರು ಯೋಜನೆಯೊಂದರಲ್ಲಿ ಹೂಡಿಕೆ ಮಾಡಲು ಕೇಳಿದ್ದರು. ಆದರೆ, ನಟ ಒಬೆರಾಯ್ ನೀಡಿದ 1.55 ಕೋಟಿ ರೂ. ಹಣವನ್ನು ಹೂಡಿಕೆ ಮಾಡದೇ ತಾವೇ ಬಳಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ವಿವೇಕ್ ಒಬೆರಾಯ್ ಪತ್ನಿ ಸಹ ಈ ಯೋಜನೆಯಲ್ಲಿ ಸಹಭಾಗಿಯಾಗಿದ್ದರು.

# ಸರ್ಕಾರವನ್ನು ಅಸ್ಥಿರ ಗೊಳಿಸಲು ಕುಟುಕು ಕಾರ್ಯಾಚರಣೆ : ಶಾಸಕರಿಗೆ ಸಿಎಂ ಎಚ್ಚರಿಕೆ

ಬೆಂಗಳೂರು, ಜು. 21 - ಸರ್ಕಾರ ಅಸ್ಥಿರಗೊಳಿಸಲು ಹವಣಿಸುತ್ತಿರುವ ಶಕ್ತಿಗಳು ಹನಿಟ್ರಾಪ್, ಕುಟುಕು ಕಾರ್ಯಾ ಚರಣೆ ಸೇರಿದಂತೆ, ಆಧುನಿಕ ತಂತ್ರಜ್ಞಾನ ಬಳಸಿ, ನಿಮ್ಮನ್ನು ಸಿಲುಕಿಸಿ, ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ನಡೆಸುತ್ತಿವೆ ಎಂದು ಸಚಿವ, ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿರುವ ಘಟನೆ ಬಹಿರಂಗಗೊಂಡಿದೆ. ಕೆಲವು ಶಕ್ತಿಗಳು ನಡೆಸುತ್ತಿರುವ ಸಂಚಿಗೆ ನೀವು ಬಲಿಯಾಗಬೇಡಿ, ಬಹಳ ಎಚ್ಚರಿಕೆಯಿಂದ ನಿಮ್ಮ ಕೆಲಸ ಕಾರ್ಯಗಳನ್ನು ನಡೆಸಿ ಎಂದಿದ್ದಾರೆ.

ಇತ್ತೀಚೆಗೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲೇ ಮುಖ್ಯ ಮಂತ್ರಿಯವರು ಕೆಲವು ಸಚಿವರನ್ನು ಗಮನದಲ್ಲಿಟ್ಟುಕೊಂಡೇ ಈ ಎಚ್ಚರಿಕೆ ಮಾತುಗಳನ್ನು ಹೇಳಿದ್ದಾರೆ. ನನಗೆ ಬಂದಿರುವ ವರದಿಯಂತೆ ಇಂತಹ ಚಟುವಟಿಕೆಗಳು ಆರಂಭ ಗೊಂಡಿವೆ. ಇದರ ಹಿನ್ನೆಲೆಯಲ್ಲಿ ನಿಮಗೆ ಮೊದಲೇ ಮಾಹಿತಿ ನೀಡುತ್ತಿದ್ದೇನೆ. ಯಾವುದಾ ದರೂ ಹನಿಟ್ರ್ಯಾಪ್ ಇಲ್ಲವೇ ಭ್ರಷ್ಟಾ ಚಾರದ ಆರೋಪಗಳಲ್ಲಿ ಸಿಲುಕಿ ಕೊಂಡರೆ, ನಾನು ಸಹಿಸುವುದೂ ಇಲ್ಲ. ಸಹಿಸಿಕೊಳ್ಳುವುದೂ ಇಲ್ಲ. ಕಾಂಗ್ರೆಸ್ ದೊಡ್ಡ ಪ್ರಮಾಣದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದರಿಂದ, ಕೆಲವರ ಕೆಂಗಣ್ಣಿಗೆ ಬಿದ್ದಿದ್ದೇವೆ. ನಾವು ಎಷ್ಟು ಸೂಕ್ಷ್ಮವಾಗಿ ಇರುತ್ತೇವೋ ಅಷ್ಟೂ ನಮಗೆ ಒಳ್ಳೆಯದು.

ನೀವು ಯಾವುದೇ ಕಡತ ಇಲ್ಲವೇ ವ್ಯವಹಾರ ಮಾಡುವಾಗ ಅತ್ಯಂತ ಸೂಕ್ಷ್ಮವಾಗಿ ವ್ಯವಹರಿಸಿ. ಇತ್ತೀಚಿನ ಘಟನೆಗಳು ನಿಮ್ಮ ಗಮನಕ್ಕೆ ಬಂದಿರಬಹುದು. ಇಂತಹ ಪ್ರಕರಣಗಳು ನಡೆದ ನಂತರವೂ ನಾವು ಎಚ್ಚೆತ್ತುಕೊಳ್ಳ ದಿದ್ದರೆ, ಒಳ್ಳೆಯ ಆಡಳಿತ ನೀಡಲು ಸಾಧ್ಯವಿಲ್ಲ ಎಂದಿದ್ದಾರೆ.

ಬಿಜೆಪಿ ಹಾಗೂ ಜೆಡಿಎಸ್ ಅದರಲ್ಲೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವರ್ಗಾವಣೆ ವಿಚಾರದಲ್ಲಿ ಕೆಲವು ದಾಖಲೆ ಬಿಡುಗಡೆ ಮಾಡುವುದಾಗಿ ಸದನದ ಒಳಗೆ ಹೊರಗೆ ಹೇಳಿದ್ದಾರೆ. ಅವರ ಬಳಿ ಯಾವ ಸತ್ಯಾಂಶವಿದೆಯೋ ನನಗೆ ಗೊತ್ತಿಲ್ಲ. ಆದರೆ ನೀವುಗಳು ಎಚ್ಚೆತ್ತುಕೊಳ್ಳ ಬೇಕು. ಬಿಜೆಪಿ ಆಡಳಿತದ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ, ನಾವು ಅಧಿಕಾರದ ಚುಕ್ಕಾಣಿ ಹಿಡಿದಿದ್ದೇವೆ. ನಮ್ಮ ಆಡಳಿತದ ಮೇಲೆ ಕಪ್ಪು ಚುಕ್ಕೆ ಕೂರುವ ಕೆಲಸವಾಗ ಬಾರದು ಎಂದವರು ಹೇಳಿದ್ದಾರೆ.

ಅಡಿಕೆ ಸಸಿಗಳು ಮಾರಾಟಕ್ಕಿವೆ
ಚಿತ್ರಹಳ್ಳಿ ಗೋಟಿನ 1.5 - 2 ವರ್ಷದ ಉತ್ತಮ ಅಡಿಕೆ ಸಸಿಗಳು ದಾವಣಗೆರೆ ತೋಟದಲ್ಲಿ ಮಾರಾಟಕ್ಕಿವೆ.
2 KG Bag - Rs. 24/-
98807 39392
98807 43838

# ಸಾಧಿಸುವ ಛಲ, ಇಚ್ಛಾಶಕ್ತಿ ರೂಢಿಸಿಕೊಂಡರೆ ಯಶಸ್ಸು ಸಾಧ್ಯ



**ದವನ - ನೂತನ ಕಾಲೇಜಿನ ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಎನ್‌ವಿರಾನ್‌ಮೆಂಟಲ್ ಕ್ಲಿಯರೆನ್ಸ್ ಸದಸ್ಯರಾದ ಡಾ.ಜೆ.ಬಿ. ರಾಜು ಅಭಿಮತ**

ದಾವಣಗೆರೆ, ಜು. 21- ಯುವಜನರು ವಿದ್ಯಾರ್ಥಿ ದೆಸೆಯಲ್ಲಿ ನಿಶ್ಚಲ ಗುರಿ, ಛಲ ಮತ್ತು ಇಚ್ಛಾಶಕ್ತಿಯನ್ನು ರೂಢಿಸಿಕೊಂಡರೆ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಘಟಕದ ಗೌರವಾಧ್ಯಕ್ಷರೂ, ಭಾರತ ಸರ್ಕಾರದ ಎನ್‌ವಿರಾನ್‌ಮೆಂಟಲ್ ಕ್ಲಿಯರೆನ್ಸ್ ಸದಸ್ಯರೂ ಆದ ಡಾ. ಜೆ.ಬಿ. ರಾಜು ಅಭಿಪ್ರಾಯಪಟ್ಟರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ದವನ-ನೂತನ ಸಂಯೋಜಿತ ದವನ ಪದವಿ ಪೂರ್ವ ಕಾಲೇಜು, ದವನ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಿಗೂ ಜ್ಞಾನ ಅತ್ಯವಶ್ಯ. ಸತತ ಪರಿಶ್ರಮ ಪಡದ ಹೊರತು ಜೀವನದಲ್ಲಿ ಯಶಸ್ಸು ಅಸಾಧ್ಯ. ಸಂಸ್ಕಾರಯುತ ಬದುಕು ಸುಂದರವಾಗಿರುತ್ತದೆ ಎಂದರು.

ವಿದ್ಯಾರ್ಥಿಗಳು ಸಮಾಜಕ್ಕೆ ತನ್ನ ಕೊಡುಗೆ ಏನು ಎಂಬುದರ ಬಗ್ಗೆ ಚಿಂತಿಸಬೇಕಾಗಿದೆ. ಸಾಧಿಸುವ ಛಲ, ಕಠಿಣ ಪರಿಶ್ರಮ ಸಾಧನೆಗೆ ರಹದಾರಿಯಾಗಿದೆ. ಸಮಾಜದಿಂದ ಗೌರವ ಪಡೆಯಬೇಕೆಂದರೆ, ಉತ್ತಮ ವ್ಯಕ್ತಿತ್ವ, ಸಂಸ್ಕಾರ ರೂಢಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ದವನ್ ಕಾಲೇಜಿನ ಗೌರವ ಕಾರ್ಯದರ್ಶಿ ವೀರೇಶ್ ಪಟೇಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ಆಸಕ್ತಿಗೆ ಅನುಗುಣವಾಗಿ ಪೋಷಕರ ಆಲೋಚನೆಗಳು ಇರಬೇಕಾಗುತ್ತದೆ. ಪೋಷಕರ ಮತ್ತು ಶಿಕ್ಷಕರ ಸೂಕ್ತ ಮಾರ್ಗದರ್ಶನದಿಂದ ಪ್ರತಿಭಾವಂತ ವಿದ್ಯಾರ್ಥಿಗಳಾಗಿ ಹೊರ ಹೊಮ್ಮಲು ಸಾಧ್ಯವಿದೆ ಎಂದರು.

ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸಿಕೊಡುವ ಅಗತ್ಯವಿದೆ. ಪೋಷಕರೂ ಸಹ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಮುಖ್ಯ. ಮಕ್ಕಳ ಬಯಕೆಗಿಂತ ಅವಶ್ಯಕತೆಗಳನ್ನು ಪೂರೈಸುವುದು ಪೋಷಕರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಓದಿನ ಜೊತೆಗೆ ಕ್ರೀಡೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ತನ್ಮೂಲಕ ಸರ್ವಾಂಗೀಣ ಬೆಳವಣಿಗೆಯತ್ತ ಗಮನ ಹರಿಸುವಂತೆ ಸಲಹೆ ನೀಡಿದರು.

ಇದೇ ವೇಳೆ ಕಾಲೇಜಿನ ವತಿಯಿಂದ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಎಂ.ಆರ್. ಲಿಖಿತ್ ( ಶೇ. 98), ಕೆ. ಗೌರಿ (ಶೇ. 97.67), ಜೈನ್ ಪಲಕ್ (ಶೇ. 97.13) ಹಾಗೂ ವಿಜ್ಞಾನ ವಿಭಾಗದ ಬಿ.ಎಂ. ಕೀರ್ತನ (ಶೇ.92.50), ಶ್ರೀಲಕ್ಷ್ಮಿ ಎಸ್. ಅಂಗಡಿ (ಶೇ. 92.17), ಹೆಚ್. ಎಸ್. ಧನುಷ್ (ಶೇ. 90.67) ಇವರನ್ನು ಪುರಸ್ಕರಿಸಲಾಯಿತು.

ನೂತನ ಎಜುಕೇಶನ್ ಅಸೋಸಿಯೇಷನ್ ಅಧ್ಯಕ್ಷ ಎನ್. ಪರಶುರಾಮಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವಿಜ್ಞಾನ ವಿಭಾಗದ ಡೀನ್ ಪ್ರೊ.ಎಸ್. ಹಾಲಪ್ಪ, ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್, ಖಜಾಂಚಿ ಎಂ.ಇ. ವಾಣಿ ಉಪಸ್ಥಿತರಿದ್ದರು.

ಬಿ.ಎಸ್. ಯಶಿಕ ಹಾಗೂ ಎನ್.ಎಂ. ಭವಿಷ್ಯ ಭರತನಾಟ್ಯ ಪ್ರದರ್ಶಿಸಿದರು. ಎ. ವರ್ಷಿತ ಹಾಗೂ ಅಖಿಲ್ ಎಸ್. ಕುಲಕರ್ಣಿ ನಿರೂಪಿಸಿದರು. ನೂತನ ಕಾಲೇಜಿನ ಪ್ರಾಚಾರ್ಯರಾದ ಕೆ.ಟಿ. ಸುಮಿತ್ರ ಸ್ವಾಗತಿಸಿದರು. ಹೆಚ್.ಸಿ. ಅಶ್ವಿನಿ ವಂದಿಸಿದರು. ಹಿರಿಯ ಉಪನ್ಯಾಸಕ ಬಿ.ಜೆ. ಚೇತನ್ ಅತಿಥಿಗಳನ್ನು ಪರಿಚಯಿಸಿದರು.




## ಆದಾಪುರ ದೇವಸ್ಥಾನದಲ್ಲಿ ಕಳ್ಳತನ

ಹರಿಹರ, ಜು. 21- ತಾಲ್ಲೂಕಿನ ಆದಾಪುರ ಶ್ರೀ ರೇಣುಕಾದೇವಿ ದೇವಸ್ಥಾನದಲ್ಲಿ ಕಳ್ಳತನವಾಗಿದ್ದು, 95 ಸಾವಿರ ರೂ. ಬೆಲೆಯ ಆಭರಣಗಳು ಹಾಗೂ 20 ರಿಂದ 25 ಸಾವಿರ ರೂ. ನಗದನ್ನು ಕಳ್ಳರು ದೋಚಿದ್ದಾರೆ. ದೇವಸ್ಥಾನದ ಬೀಗ ಹೊಡೆದಿರುವ ಕಳ್ಳರು, ದೇವಿಯ ಮೈ ಮೇಲಿದ್ದ 12 ಗ್ರಾಂ ತೂಕದ ಬಂಗಾರದ 4 ತಾಳಿಗಳು, 5 ಗ್ರಾಂ ತೂಕದ 2 ಮುಕ್ರಗಳು ಹಾಗೂ ಹುಂಡಿಯಲ್ಲಿದ್ದ ಹಣವನ್ನು ಕಳ್ಳತನ ಮಾಡಿದ್ದಾರೆಂದು ದೇವಸ್ಥಾನ ಟ್ರಸ್ಟ್ ಸದಸ್ಯ ಟಿ.ನೀಲಕಂಠಪ್ಪ ಮಲೇಬೆನ್ನೂರು ಪೊಲೀಸರಿಗೆ ದೂರು ನೀಡಿದ್ದಾರೆ.




ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ಎಸ್ಟೇಟರ್ಸ್ ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷರು, ಕ್ರಿಯಾಶೀಲರೂ, ಸ್ನೇಹಜೀವಿಗಳು ಆದ

**ಶ್ರೀ ಎ.ಆರ್.ಉಜ್ಜಿನಪ್ಪ ಅವರು**

ಶುಕ್ರವಾರ ದಿ : 21-07-23 ರ ಬೆಳಗಿನ ಜಾವ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿಗಳು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ

ಪದಾಧಿಕಾರಿಗಳು ಮತ್ತು ಸದಸ್ಯರು
ಎಸ್ಟೇಟರ್ಸ್ ಸ್ಪೋರ್ಟ್ಸ್ ಕ್ಲಬ್,
18ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.

ಆವರಗೆರೆ ಕಿತ್ತೂರು ನಂದಿಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ವಾಸಿ

**ಕಿತ್ತೂರು ನಂದಿಬಸಪ್ಪ**

ಇವರು, ದಿನಾಂಕ :21.07.2023ರ ಶುಕ್ರವಾರ ಸಂಜೆ 6.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಇಬ್ಬರು ಪತ್ನಿಯರು, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 22.07.2023ರ ಶನಿವಾರ ಮಧ್ಯಾಹ್ನ 1ಕ್ಕೆ ಆವರಗೆರೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**

ಮೊ : 98447 35915, 79755 12973, 97436 18914